# ಮನುವಿಕಾಸ ವಾರ್ತಾಪತ್ರ

EdelGive Foundation
An Edelweiss Initiative

ಸಂಪುಟ - 2 ಸಂಚಿಕೆ - 2
ಜುಲೈ ನಿಂದ ಮಾರ್ಚ್ 2019
ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕರು : ಶ್ರೀ ಗಣಪತಿ ಭಟ್ಟ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ತ್ರೈಮಾಸಿಕ ವಾರ್ತಾ ಪತ್ರ


## ಸಿರಸಿಯಲ್ಲಿ ಬೃಹತ್ ಮಹಿಳಾ ಸಮಾವೇಶ
## ಸಾವಿರಾರು ಮಹಿಳೆಯರಿಂದ ಮುಖ್ಯ ಮಂತ್ರಿಗಳಿಗೆ ಹಕ್ಕೊತ್ತಾಯ




ಕೃಷಿ ಕೂಲಿಕಾರ್ಮಿಕರು, ಮೀನುಗಾರ ಮಹಿಳೆಯರು, ಸಣ್ಣ ರೈತ ಮಹಿಳೆಯರು ಸೇರಿದಂತೆ ಅಸಂಘಟಿತ ವಲಯದ ಸಾವಿರಾರು ಮಹಿಳೆಯರು ಡಿಸೆಂಬರ್ 15 ರಂದು ಶಿರಸಿಯ ವೀರಭದ್ರ ಕಲ್ಯಾಣ ಮಂಟಪದಲ್ಲಿ ಸಮಾವೇಶಗೊಂಡಿದ್ದರು. ಸಮಾವೇಶವನ್ನು ಮನುವಿಕಾಸ ಸಂಸ್ಥೆ ಕರ್ಜಗಿ ಇವರು ಈಡಲ್ ಗೀವ್ ಪ್ರತಿಷ್ಠಾನದ ಸಹಕಾರದಲ್ಲಿ ಆಯೋಜಿಸಿದ್ದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿರಸಿಯ ಪ್ರಸಿದ್ಧ ಸ್ತ್ರೀ ತಜ್ಞರಾದ ಶ್ರೀಮತಿ ಶಾಂತಾ ಭಟ್ಟ ಮಾತನಾಡಿ ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಮನುವಿಕಾಸ ಸಂಸ್ಥೆ ಉತ್ತಮ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಗ್ರಾಮೀಣ ಪ್ರದೇಶಗಳಿಗೆ ತೆರಳಿ ಮಹಿಳೆಯರನ್ನು ಸಂಘಟಿಸಿ ಅವರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

- ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ವಿಶೇಷ ಆಸಕ್ತಿ ವಹಿಸಬೇಕು ಎಂದರು.
- ಮಹಿಳೆಯರು ತರಕಾರಿ, ಹಣ್ಣು ಮತ್ತಿತರ ಪೋಷಕಾಂಶವಿರುವ ಆಹಾರ ಸೇವಿಸಬೇಕು
- ಅತಿ ಬಿಗಿಯಾದ ಬಟ್ಟೆಗಳನ್ನು ಧರಿಸಬಾರದು
- ಋತುಮತಿಯಾದ ಸಂದರ್ಭದಲ್ಲಿ ವಿಶ್ರಾಂತಿ ಪಡೆಯಬೇಕು ಮತ್ತು ಶುಭ್ರವಾದ ಬಟ್ಟೆಗಳನ್ನು ಧರಿಸಬೇಕು
- ಅಂಗಡಿಯ ಕುರುಕಲು ತಿಂಡಿಗಳನ್ನು ಮಕ್ಕಳಿಗೆ ಕೊಡುವುದು ನಿಲ್ಲಿಸಬೇಕು ಮತ್ತು ಮಹಿಳೆಯರೂ ಸೇವಿಸಬಾರದು
- ಗ್ರಾಮೀಣ ಭಾಗದಲ್ಲಿ ಮುಟ್ಟಿನ ಬಗ್ಗೆ ತಪ್ಪು ಕಲ್ಪನೆ ಇದೆ. ಮುಟ್ಟಿನ ಸಮಯದಲ್ಲಿ ರಕ್ತ ಹೀನತೆ ಉಂಟಾಗುತ್ತದೆ. ಅವರಿಗೆ ಶಕ್ತಿಯುತ ಉತ್ತಮ ಅಹಾರ ನೀಡಬೇಕು.
- ಮುಟ್ಟಿನ ಸಮಯದಲ್ಲಿ ಶುಭ್ರವಾದ ಮತ್ತು ಉತ್ತಮ ಗುಣಮಟ್ಟದ ಸೆನಿಟರಿ ಪ್ಯಾಡ್ ಬಳಸಬೇಕು. ಸ್ಥಳೀಯವಾಗಿ ಸೆನಿಟರಿ ಪ್ಯಾಡ್ ತಯಾರಿಸುವ ವ್ಯವಸ್ಥೆ ಆಗಬೇಕು. ಬಳಸಿದ ಸೆನಿಟರಿ ಪ್ಯಾಡ್‌ಗಳನ್ನು ಪರಿಸರಕ್ಕೆ ತೊಂದರೆ ಆಗದಂತೆ ವಿಸರ್ಜನೆ ಮಾಡಬೇಕು. ಸಿರಸಿಯ ಇನ್ನರ್ ವ್ಹೀಲ್ ಕ್ಲಬ್‌ನವರು, ಉಪಯೋಗಿಸಿದ ಸೆನಿಟರಿ ಪ್ಯಾಡ್ ಸುಟ್ಟುಹಾಕುವ ಯಂತ್ರಗಳನ್ನು ವಿವಿಧ ಶಾಲೆಗಳಿಗೆ ವಿತರಿಸುತ್ತಿದ್ದಾರೆ. ಇದು ಉತ್ತಮ ಯೋಜನೆಯಾಗಿದೆ.

ಎರಡನೇ ಪುಟಕ್ಕೆ....

# ಸಂಪಾದಕೀಯ....

ಮನುವಿಕಾಸ ವಾರ್ತಾ ಪತ್ರದ ಮೂರನೆ ಸಂಚಿಕೆ ಹೊರ ತರಲು ತುಂಬಾ ಸಂತೋಷವಾಗುತ್ತಿದೆ. ಪ್ರಥಮ ಸಂಚಿಕೆಯನ್ನು ಕನ್ನಡದಲ್ಲಿಯೂ ಎರಡನೇ ಸಂಚಿಕೆಯನ್ನು ಇಂಗ್ಲೀಷನಲ್ಲಿಯೂ ಪ್ರಕಟಿಸಿದ್ದೇವೆ. ಈಗ ಈ ಮೂರನೇ ಸಂಚಿಕೆಯು ವಿಶೇಷವಾಗಿ ಮಹಿಳಾ ಸಬಲೀಕರಣದ ಕುರಿತು ಹೆಚ್ಚಿನ ಮಾಹಿತಿಯನ್ನು ಹೊತ್ತು ಹೊರಬಂದಿದೆ. ಕಳೆದ ಹದಿನೈದು ವರ್ಷಗಳಿಂದ ಸಂಸ್ಥೆಯು ಅವಿರತವಾಗಿ ಮಹಿಳಾ ಸಬಲೀಕರಣ, ಜನರ ಜೀವನ ಮಟ್ಟ ಸುಧಾರಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆ ಮುಂತಾದ ವಿಷಯಗಳ ಕುರಿತು ಕೆಲಸ ನಿರ್ವಹಿಸುತ್ತಿದೆ.

ಸಂಸ್ಥೆಯ ಕೆಲಸ ಗಮನಿಸಿ ಯೆಸ್ ಬ್ಯಾಂಕಿನಿಂದ ಪ್ರಾರಂಭಗೊಂಡ ಯೆಸ್ ಫೌಂಡೇಶನ್ ಯೆಸ್ ಆಯ್ ಎಮ್ ದಿ ಚೇಂಜ್ ಪ್ರಶಸ್ತಿಯನ್ನು ಸಂಸ್ಥೆಗೆ ನೀಡಿದೆ. ಜೊತೆಗೆ ಮೂವತ್ತು ಲಕ್ಷ ಅನುದಾನವನ್ನೂ ಘೋಷಿಸಿದೆ.

ಹೌದು, ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದೇ ಕೇವಲ ಸಾಮಾನ್ಯ ಕುಟುಂಬಕ್ಕೆ ಸೇರಿದ ಯುವಕರ ಗುಂಪು ಸಂಸ್ಥೆಯನ್ನು ಪ್ರಾರಂಭಿಸಿದಾಗ ಇವರೇನು ಮಾಡುತ್ತಾರೆ ಎನ್ನುವ ಅಸಡ್ಡೆ ಸಾಮಾನ್ಯ. ಆದರೆ ಸಂಸ್ಥೆ ಇಂದು ಜಿಲ್ಲೆಯಲ್ಲಿ ಯಾರಿಗೂ ಸಾಧ್ಯವಾಗಿರದ 30 ಕ್ಕೂ ಹೆಚ್ಚು ಸಾರ್ವಜನಿಕ ಕೆರೆಗಳನ್ನು ರೈತರ ಸಹಭಾಗಿತ್ವ ಪಡೆದು ಹೂಳೆತ್ತಿ ತೋರಿಸಿದೆ. ಜೊತೆಗೆ ಗ್ರಾಮೀಣ ಪ್ರದೇಶಗಳಿಗೆ ತೆರಳಿ 3000 ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ಕೇವಲ ರೂ. 5000 ಪಡೆದು ನಿರ್ಮಿಸಲಾಗಿದೆ (ಹಿಟಾಚಿ ಯಂತ್ರವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಅಷ್ಟು ಖರ್ಚು ತಗಲುತ್ತದೆ).

ಬೆಟ್ಟ ಭೂಮಿಯಲ್ಲೂ ಸಂಸ್ಥೆ ಸಣ್ಣ ಇಂಗು ಗುಂಡಿಗಳು ಮತ್ತು ನೀರಿಂಗಿಸುವ ಘಟಕಗಳನ್ನು ರಚಿಸಿದೆ. ಮೂರು ತಾಲೂಕಿನ ಹೆಚ್ಚಿನ ಹಳ್ಳಿಗಳನ್ನು ತಲುಪಿ ಬೆಟ್ಟದಲ್ಲಿ ನೀರಿಂಗಿಸುವ ಕೆಲಸ ನಿರ್ವಹಿಸಿದೆ. ಸಂಸ್ಥೆಗೆ ಪ್ರಾರಂಭದಲ್ಲಿ ಸಹಕಾರ ನೀಡಿದ ದೇಶಪಾಂಡೆ ಪ್ರತಿಷ್ಠಾನ ಕೇವಲ ಆರ್ಥಿಕ ಸಹಕಾರವಷ್ಟೇ ಅಲ್ಲದೇ ಸಂಸ್ಥೆಯ ಬೆಳವಣಿಗೆಗೆ ಬೇಕಾದ ಎಲ್ಲ ರೀತಿಯ ಮಾರ್ಗದರ್ಶನ ನೀಡಿದೆ.

ಪ್ರಾರಂಭದಲ್ಲಿ ದೊಡ್ಡ ಕೆರೆಗಳನ್ನು ಬನವಾಸಿ ಹೋಬಳಿಯಲ್ಲಿ ಹೂಳೆತ್ತಲು ಪ್ರಾರಂಭಿಸಿದಾಗ, ರೈತರು ತೆಗೆದ ಹೂಳನ್ನು ಹೊಲಗಳಿಗೆ ಸಾಗಿಸಲು ಹಿಂದೇಟು ಹಾಕುತ್ತಿದ್ದರು. ಸರಕಾರದಿಂದ ಅನುಮತಿ ಪಡೆಯಲೂ ಹರಸಾಹಸ ಪಡಬೇಕಾಯಿತು. ಶಾಸಕರಾದ ಶ್ರೀ ಶಿವರಾಮ ಹೆಬ್ಬಾರರ ಸಹಕಾರದಿಂದ ಸರಕಾರದ ಅನುಮತಿ ಪಡೆದು 09 ಕೆರೆಗಳನ್ನು ಹೂಳೆತ್ತಲಾಯಿತು. ಕೆಲವು ರೈತರು ಸ್ವ ಇಚ್ಛೆಯಿಂದ ಮತ್ತೆ ಕೆಲವರು ನಮ್ಮ ಒತ್ತಾಯದಿಂದ ತಮ್ಮ ಸಂತ ಹಣದಲ್ಲಿ ಟ್ರಾಕ್ಟರ್ ಬಾಡಿಗೆ ಪಡೆದು ಮಣ್ಣು ಸಾಗಿಸಿ ಯೋಜನೆಯ ಯಶಸ್ಸಿಗೆ ಕಾರಣರಾದರು.

ಕಳೆದ ವರ್ಷ ಮಣ್ಣನ್ನು ಹೊಲಕ್ಕೆ ಸಾಗಿಸಿದ ರೈತರು ಕಡಿಮೆ ಗೊಬ್ಬರ ಬಳಿಸಿ ಉತ್ತಮ ಫಸಲನ್ನು ಕಂಡಿದ್ದಾರೆ. ಹೊಸೂರಿನ ರೈತರೊಬ್ಬರು ಎಕರೆಗೆ 15 ಚೀಲ ಭತ್ತ ಬೆಳೆಯುವವರು ಈ ವರ್ಷ ಕೆರೆಯ ಹೂಳನ್ನು ಬಳಸಿ 40 ಚೀಲ ಭತ್ತ ಬೆಳೆದಿದ್ದಾರೆ. ಈ ವರ್ಷ ಎಲ್ಲ ಕಡೆ ಕೆರೆ ಹೂಳೆತ್ತಲು ಬೇಡಿಕೆ ಬರುತ್ತಿದೆ.

ಮಣ್ಣಿನ ಬೇಡಿಕೆ ಇದೆ ಆದರೂ ನೀವು ಕೇವಲ ಮೂರ್ನಾಲ್ಕು ಅಡಿ ಹೂಳನ್ನು ಮಾತ್ರ ತೆಗೆಯುತ್ತೀರಿ. ಗೊಚ್ಚು ಮಣ್ಣನ್ನು ತೆಗೆಯುತ್ತಿಲ್ಲ ಏಕೆ ಎಂದು ಅನೇಕರು ಪ್ರಶ್ನೆ ಹಾಕುತ್ತಾರೆ. ಕೆರೆಯನ್ನು ಆಳವಾಗಿ ಹೂಳೆತ್ತಿದರೆ ಅಂದರೆ ಮದರ್ ಸೊಯ್ಲ್ ಡೆಮೇಜ್ ಮಾಡಿದರೆ ಕೆರೆಯಲ್ಲಿ ನೀರು ನಿಲ್ಲುವ ಸಾಧ್ಯತೆ ಇಲ್ಲ. ಎಲ್ಲ ಇಂಗಿ ಹೋಗುತ್ತದೆ. ಸರ್ಕಾರ ಈ ಉದ್ದೇಶದಿಂದ ಕೆರೆ ಮಣ್ಣನ್ನು ಆಳವಾಗಿ ತೆಗೆಯದಂತೆ ನಿಯಮ ಮಾಡಿದೆ. ದೊಡ್ಡ ಕೆರೆಗಳಲ್ಲಿ ಮುಖ್ಯ ಬದುವಿನಿಂದ 30 ಮೀಟರ್ ವರೆಗೆ ಯಾವುದೇ ಮಣ್ಣನ್ನು ತೆಗೆಯುವಂತಿಲ್ಲ ಎನ್ನುವ ನಿಯಮವೂ ಇದೆ.

ಪ್ರಥಮ ಸಂಚಿಕೆ ಬಿಡುಗಡೆ ಗೊಳಿಸುವಾಗ ಸಿರಸಿ ಸಿದ್ದಾಪುರ ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆಯವರು ನೀವು ಸಂಸ್ಥೆಯ ಕೆಲಸದ ವರದಿಯೊಂದಿಗೆ ಕೆಲವು ಮಾಹಿತಿಯನ್ನೂ ಸೇರಿಸಿ ಅಂದಿದ್ದರು. ತುಂಬಾ ಸ್ವೀಕಾರಾರ್ಹ ಸಲಹೆ. ಸಂಸ್ಥೆ ಈ ದಿಸೆಯಲ್ಲಿಯೂ ಪ್ರಯತ್ನಿಸಿದೆ.

ಮಹಿಳಾ ಸಬಲೀಕರಣ ವಿಷಯ ಬಂದಾಗ ಸ್ವ-ಸಹಾಯ ಸಂಘ ರಚಿಸಿ ಸಾಲ ಸೌಲಭ್ಯ ನೀಡಿದರಷ್ಟೇ ಸಾಲದು. ಅವರಿಗೆ ಕೌಶಲ್ಯ ಆಧಾರಿತ ತರಬೇತಿ ಕೂಡ ಅವಶ್ಯಕವಿದೆ ಎನ್ನುವುದನ್ನು ಮನಗಂಡ ಸಂಸ್ಥೆ ಕೌಶಲ್ಯ ತರಬೇತಿಯನ್ನೂ ಅದೂ ಅವರ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ ಮಾಡುತ್ತಿದೆ.

ಮನುವಿಕಾಸ ಸಂಸ್ಥೆ ಹೊಸ ಹೊಸ ಕಾರ್ಯಕ್ರಮಗಳನ್ನು ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಗೆ ಹಮ್ಮಿಕೊಳ್ಳುತ್ತಿದೆ. ಎಲ್ಲ ಯೋಜನೆಗಳೂ ಏಳು ಬೀಳುಗಳನ್ನು ಎದುರಿಸಿ ಸುಸ್ಥಿರತೆ ಪಡೆಯಲು ಸಮಯಾವಕಾಶ ಪಡೆಯುತ್ತಿವೆ. ಸಂಸ್ಥೆ ಸಾರ್ವಜನಿಕರ, ಸರ್ಕಾರದ ಮತ್ತು ವಿಷಯ ತಜ್ಞರ ಸಲಹೆ ಪಡೆಯಲು ಸದಾ ಉತ್ಸುಕವಾಗಿದೆ



ಗಣಪತಿ ಭಟ್ಟ

---

ಮೊದಲನೇ ಪುಟದಿಂದ....

- ಮುಟ್ಟಿನ ಸಮಯದಲ್ಲಿ ಕೆಲವರಿಗೆ ಹೊಟ್ಟೆನೋವು ಕಾಣಿಸಿಕೊಳ್ಳುವುದು ಸಾಮಾನ್ಯ. ಅದಕ್ಕೆ ಅಂಜಬೇಕಾಗಿಲ್ಲ. ಹೊಟ್ಟೆ ನೋವಿಗೆ ವೈದ್ಯರ ಸಲಹೆ ಪಡೆದು ಮಾತ್ರೆಗಳನ್ನು ಸೇವಿಸಬಹುದು. ಮಾತ್ರೆ ಸೇವಿಸಿದರೆ ಕಿಡ್ನಿಗೆ ತೊಂದರೆ ಬರುತ್ತದೆ, ಅಡ್ಡ ಪರಿಣಾಮ ಉಂಟಾಗುತ್ತದೆ ಎನ್ನುವುದು ತಪ್ಪು ಕಲ್ಪನೆ.
- ಬಿಳಿಮುಟ್ಟು ಆದಾಗ ಹೆದರುವ ಅವಶ್ಯಕತೆ ಇಲ್ಲ. ಬಿಳಿ ಮುಟ್ಟಿನಲ್ಲಿ ವಾಸನೆ, ತುರಿಕೆ ಇದ್ದಾಗ ವೈದ್ಯರನ್ನು ಸಂಪರ್ಕಿಸಬೇಕು. ಅಶಕ್ತತೆ ಇದ್ದಾಗ ಬಿಳಿಮುಟ್ಟು ಕಾಣಿಸಿಕೊಳ್ಳುತ್ತದೆ. ಆಗ ಉತ್ತಮ ಆಹಾರ ಸೇವಿಸಬೇಕು.
- ಇತ್ತೀಚಿಗೆ ಹೆಣ್ಣು ಮಕ್ಕಳು ಟಿ. ವಿ. ಮೊಬೈಲ್ ನಲ್ಲಿ ಹೆಚ್ಚಿನ ಸಮಯವನ್ನು ಕಳೆಯುವುದು, ಕುಳಿತುಕೊಂಡೇ ಇರುವುದರಿಂದ ವ್ಯಾಯಾಮ ಕಡಿಮೆ ಆಗಿ ಬಿಳಿಮುಟ್ಟು ಕಾಣಿಸಿಕೊಳ್ಳುತ್ತದೆ. ಹೆಣ್ಣುಮಕ್ಕಳಿಗೆ ವ್ಯಾಯಾಮದ ಅವಶ್ಯಕತೆ ಇದೆ. ಸ್ಕಿಪಿಂಗ್ ಅಥವಾ ಹಗ್ಗದ ಆಟವನ್ನಾದರೂ ಆಡಬೇಕು.ಕೆಲವು ಹೆಣ್ಣುಮಕ್ಕಳು ವಯಸ್ಸಿಗೆ ಬಂದಂತೆ ನಿಯಮಿತವಾಗಿ ಆಹಾರ ಸೇವನೆ, ವಿಶ್ರಾಂತಿ ಪಡೆಯದೆ ಇರುವುದರಿಂದ ಮತ್ತು ಸರಿಯಾಗಿ ನೀರು ಕುಡಿಯದೇ ಇರುವುದರಿಂದ ಆರೋಗ್ಯದಲ್ಲಿ ವ್ಯತ್ಯಯವಾಗುತ್ತದೆ.

- ಬಾಳಂತಿ ಮಹಿಳೆಯರಿಗೆ ಹೊಟ್ಟೆ ಒಣಗದಂತೆ ನೋಡಿಕೊಳ್ಳಬೇಕು. ಕುಡಿಯಲು ಸಾಕಷ್ಟು ನೀರು ಕೊಡಬೇಕು.
- ಈಗ ಬಹಳ ಸುಲಭವಾಗಿ ಮಾಡುವಂತಹ ನೋವು ಕಡಿಮೆ ಇರುವ, ಕಡಿಮೆ ರಕ್ತ ವ್ಯಯವಾಗುವ ಸಂತಾನ ನಿರೋಧಕ ಶಸ್ತ್ರ ಚಿಕಿತ್ಸೆಯನ್ನು ಮಹಿಳೆಯರಿಗೆ ಮಾಡುಲಾಗುತ್ತಿದೆ. ಎರಡು ಮಕ್ಕಳಿರುವ ಮಹಿಳೆಯರು ಮಕ್ಕಳು ಶಾಲೆಗೆ ಹೋಗುವಷ್ಟು ದೊಡ್ಡವರಾದಮೇಲೆ ಶಸ್ತ್ರ ಚಿಕಿತ್ಸೆ ಮಾಡಿಕೊಳ್ಳಬಹುದು. ಶಸ್ತ್ರಚಿಕಿತ್ಸೆ ಮಾಡಿಕೊಂಡ ಮಹಿಳೆಯರು ನಾಲ್ಕುತಾಸಿನ ಒಳಗಡೆ ಆಸ್ಪತ್ರೆಯಿಂದ ತೆರಳಬಹುದು ಮತ್ತು ಮರುದಿನವೇ ಅಡಿಗೆ ಕೆಲಸ ಮಾಡಬಹುದು. ಒಂದು ವಾರದವರೆಗೆ ಶ್ರಮದಾಯಕ ಕೆಲಸ ಮಾಡಬಾರದು. ಹೆಚ್ಚಿನ ವಿಶ್ರಾಂತಿ ಅವಶ್ಯಕತೆ ಇಲ್ಲ.


ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಡಾ. ಶಾಂತಾ ಭಟ್ಟ



ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಶ್ರೀಮತಿ ಉಷಾ ಹೆಗಡೆ, ಸದಸ್ಯರು, ಜಿ.ಪಂ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀಮತಿ ಉಷಾ ಹೆಗಡೆ ಮಾತನಾಡಿ ಮನುವಿಕಾಸ ಸಂಸ್ಥೆ ಮಾದರಿ ಸ್ವಯಂ ಸೇವಾ ಸಂಸ್ಥೆಯಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊರ ಹೊಮ್ಮಿದೆ. ಕೆರೆ ಅಭಿವೃದ್ಧಿ ಕ್ಷೇತ್ರದಲ್ಲಿ ಸಂಸ್ಥೆ ತನ್ನದೇ ಆದ ಸಾಧನೆ ಮಾಡಿದೆ. ಪ್ರತಿಯೊಬ್ಬರು ಅದರಲ್ಲೂ ವಿದ್ಯಾವಂತರು ತಾವು ಜನ್ಮವಿತ್ತ ನೆಲದಲ್ಲೇ ಸಾಧನೆ ಮಾಡುವುದು ಅತ್ಯವಶ್ಯಕ. ಪ್ರತಿಯೊಬ್ಬರಿಗೂ ಜನ್ಮ ನೀಡುವವಳು ಮಹಿಳೆ, ಅವಳಿಗೆ ಗೌರವ ನೀಡುವುದರಿಂದ ಯಾರಿಗೂ ನಷ್ಟವಿಲ್ಲ. ಸರಕಾರ ರೈತರಿಗೆ ಹೇಗೆ ಶೇ 4 ರ ಬಡ್ಡಿ ದರದಲ್ಲಿ ಸಾಲ ನೀಡುತ್ತದೆಯೋ ಹಾಗೆ ಸ್ವ-ಸಹಾಯ ಸಂಘಗಳಿಗೂ ಶೇ 4 ರ ಬಡ್ಡಿದರದಲ್ಲಿ ಸಾಲ ನೀಡಬೇಕು ಎಂದು ಆಗ್ರಹಿಸಿದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ ಮನುವಿಕಾಸ ಸಂಸ್ಥೆ ಮಹಿಳೆಯರ ಜೀವನಮಟ್ಟ ಸುಧಾರಣೆಗೆ ವಿಶೇಷ ಆಸಕ್ತಿ ವಹಿಸಿ ಕೆಲಸ ನಿರ್ವಹಿಸುತ್ತಿದೆ. ಸ್ವ-ಸಹಾಯ ಸಂಘಗಳ ರಚನೆ, ಬಲವರ್ಧನೆ, ಒಕ್ಕೂಟಗಳ ರಚನೆ, ಸ್ವ-ಉದ್ಯೋಗ ತರಬೇತಿಗಳು, ಆದಾಯ ಉತ್ಪನ್ನ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸುವ ಮೂಲಕ ಮಹಿಳಾ ಸಬಲೀಕರಣಕ್ಕೆ ಸಂಸ್ಥೆ ನಿರಂತರ ಶ್ರಮಿಸುತ್ತಿದೆ ಎಂದರು.



ಸ್ವ-ಸಹಾಯ ಸಂಘಗಳಿಗೆ ಕಿಟ್ ವಿತರಣೆ ಮಾಡುತ್ತಿರುವ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರ ಭಟ್ಟ ಇವರು



ಮಹಿಳೆ ಮತ್ತು ಉದ್ಯಮಶೀಲತೆ ಕುರಿತು ಚರ್ಚಾ ಗೋಷ್ಠಿ



ಸಾಂಸ್ಕೃತಿಕ ಕಾರ್ಯಕ್ರಮ



ಸ್ವ ಸಹಾಯದ ಸಂಘದ ಮಹಿಳೆಯರಿಗೆ ಕಿಟ್ ವಿತರಣೆ

# ಮಹಿಳಾ ಸಬಲೀಕರಣದಲ್ಲಿ ಮನುವಿಕಾಸ ಸಂಸ್ಥೆಯ ಕಾರ್ಯಕ್ರಮಗಳು

- ಮನುವಿಕಾಸ ಸಂಸ್ಥೆ ಸುಮಾರು 3000 ಸ್ವ-ಸಹಾಯ ಸಂಘಗಳು ಮತ್ತು ಜಂಟಿ ಬಾಧ್ಯತಾ ಸಂಘಗಳನ್ನು ರಚಿಸಿದೆ.
- ಸಂಸ್ಥೆ ಉತ್ತರ ಕನ್ನಡ ಜಿಲ್ಲೆಯ ಎಲ್ಲ ತಾಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿದೆ
- ಸಂಸ್ಥೆ 25,000 ಮಹಿಳೆಯರನ್ನು 3000 ಸಂಘಗಳಲ್ಲಿ ಮತ್ತು 50 ಕ್ಕೂ ಹೆಚ್ಚು ಒಕ್ಕೂಟಗಳಲ್ಲಿ ಸಂಘಟಿಸಿದೆ.
- ಮನುವಿಕಾಸದಿಂದ ಪ್ರತೀ ಸಂಘಗಳಿಗೆ ಸ್ವ-ಸಹಾಯ ಸಂಘದ ಪರಿಕಲ್ಪನೆ ಮತ್ತು ಲೆಕ್ಕ ಪತ್ರ ನಿರ್ವಹಣೆ ಕುರಿತು ತರಬೇತಿ ನೀಡಲಾಗುತ್ತಿದೆ.
- ಸಂಸ್ಥೆ ಬ್ಯಾಂಕು ಮತ್ತು ಬ್ಯಾಂಕೇತರ ಹಣಕಾಸಿನ ಮೂಲದಿಂದ 50 ಕೋಟಿಗೂ ಹೆಚ್ಚು ಸಾಲವನ್ನು ಸ್ವ-ಸಹಾಯ ಸಂಘಗಳಿಗೆ ಒದಗಿಸಿದೆ.
- ಸುಮಾರು 5000 ಕ್ಕೂ ಹೆಚ್ಚು ಮಹಿಳೆಯರು ಸಂಸ್ಥೆಯ ಸಹಕಾರದಲ್ಲಿ ಸ್ವ-ಉದ್ಯೋಗ ಪ್ರಾರಂಭಿಸಿದ್ದಾರೆ.
- ದೇಶಪಾಂಡೆ ಪ್ರತಿಷ್ಠಾನದ ನವೋದ್ಯಮಿ ಕಾರ್ಯಕ್ರಮವನ್ನು ಸ್ವ-ಸಹಾಯ ಸಂಘದ ಸದಸ್ಯರಿಗೆ ಪರಿಚಯಿಸಿ ತಂತ್ರಜ್ಞಾನ ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸಲಾಗುತ್ತಿದೆ.
- ಮಹಿಳಾ ಸಂಘಗಳಿಗೆ ಸಾಲ ಸೌಲಭ್ಯ ಒದಗಿಸಲು ಸಂಸ್ಥೆ ನಬಾರ್ಡ ಫೈನಾನ್ಸ್, ಕೆವಿಜಿ ಬ್ಯಾಂಕ್, ಐಸಿಐಸಿಆಯ್ ಮತ್ತು ಮೈಕ್ರೋ ಗ್ರಾಮ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.
- ಮಹಿಳಾ ಸ್ವ-ಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಒದಗಿಸಲು ಸಂಸ್ಥೆ ಪ್ರಗತಿಮಿತ್ರ ಸೌಹಾರ್ಧ ಸಹಕಾರಿ ಬ್ಯಾಂಕ್ ಪ್ರಾರಂಭಿಸಿದೆ.
- ಸ್ವ-ಸಹಾಯ ಸಂಘಗಳಿಗೆ ಪುಸ್ತಕ ನಿರ್ವಹಣೆ ಮತ್ತು ದಾಖಲಾತಿ ನಿರ್ವಹಣೆಗೆ ಎಲ್ಲ ತಾಲೂಕುಗಳಲ್ಲಿ ಸಿಬ್ಬಂದಿಗಳನ್ನು ನೇಮಿಸಿದೆ.
- ಸಂಘದ ವಾರ್ಷಿಕ ಲೆಕ್ಕ ಪತ್ರ ತಪಾಸಣೆಗೆ ನೆರವು ನೀಡಲಾಗುತ್ತಿದೆ.
- ಸಂಘದ ಸದಸ್ಯರಿಗೆ ಗ್ರಾಮ ಮಟ್ಟದಲ್ಲಿ ಕಂಪ್ಯೂಟರ್, ಬ್ಯುಟಿಶಿಯನ್ ಮತ್ತು ಉದ್ಯಮಶೀಲತಾ ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ.
- ಮನುವಿಕಾಸ ಸಂಸ್ಥೆ ನಬಾರ್ಡ ಸಹಕಾರದಲ್ಲಿ ಈಶಕ್ತಿ ಯೋಜನೆಯನ್ನು ಜಾರಿಗೊಳಿಸಿದ್ದು ಸಂಘಗಳನ್ನು ಗಣಕೀಕೃತಗೊಳಿಸಿ ಆರ್ಥಿಕ ವ್ಯವಹಾರವನ್ನು ನಡೆಸಲು ಸರಳೀಕರಣಗೊಳಿಸಲಾಗಿದೆ.

ಸಿರಸಿಯ ಮಹಾಲಕ್ಷ್ಮಿ ಮೆಮೋರಿಯಲ್ ಆಸ್ಪತ್ರೆಯ ವೈದ್ಯರಾದ ಡಾ. ಸುಮನ್ ಹೆಗಡೆ ಮಾತನಾಡಿ ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ನೀಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮನುವಿಕಾಸ ಸಂಸ್ಥೆ ಸಹಸಂಸ್ಥಾಪಕರಾದ ಶ್ರೀ ಹರಿಶ್ಚಂದ್ರ ಭಟ್ಟ ವಹಿಸಿದ್ದರು. ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ಆರ್. ಎ. ಖಾಜಿ, ಇನ್ನರ್ ವ್ಹೀಲ್ ಅಧ್ಯಕ್ಷೆ ಫ್ಲೇವಿಯಾ ರೋಡ್ರಗೀಸ್, ಪ್ರಸಿದ್ಧ ಲೆಕ್ಕ ಪರಿಶೋಧಕರಾದ ಶ್ರೀ ಮಂಜುನಾಥ ಶೆಟ್ಟಿ, ಡಾ. ಕೆ. ವಿ ಶಿವರಾಮ ಉಪಸ್ಥಿತರಿದ್ದರು



ಮಹಿಳೆ ಮತ್ತು ಕಾನೂನು ಕುರಿತು ಚರ್ಚಾ ಗೋಷ್ಠಿ

ಸಮಾವೇಶದಲ್ಲಿ ಮಹಿಳೆ ಮತ್ತು ಕಾನೂನು ಎನ್ನುವ ವಿಚಾರದ ಕುರಿತು ಚರ್ಚಾಗೋಷ್ಠಿ ನಡೆಯಿತು. ಪ್ರಸಿದ್ಧ ನ್ಯಾಯವಾದಿಗಳಾದ ಶ್ರೀಮತಿ ಸರಸ್ವತಿ ಹೆಗಡೆ, ಶ್ರೀಮತಿ ವತ್ಸಲಾ ಹೆಗಡೆ, ಶ್ರೀಮತಿ ಅಂಜನಾ ಭಟ್ಟ ಮತ್ತಿತರರು ಉಪಸ್ಥಿತರಿದ್ದರು. ಶ್ರೀ ವಿವೇಕ ಹೆಗಡೆ ಚರ್ಚಾ ಗೋಷ್ಠಿಯನ್ನು ನಡೆಸಿಕೊಟ್ಟರು.

ನೊಂದ ಮಹಿಳೆಯರಿಗೆ ಸಾಂತ್ವನ ವೇದಿಕೆಯ ಸಹಕಾರ ಪಡೆಯಲು ಶ್ರೀಮತಿ ವತ್ಸಲಾ ಕರೆ ನೀಡಿದರು.

ಅನೇಕ ವರ್ಷಗಳಿಂದ ಅರಣ್ಯಪ್ರದೇಶದಲ್ಲಿ ವಾಸಿಸುತ್ತಿರುವ ಮಹಿಳೆಯರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿಗಳು ಕಿರುಕುಳ ನೀಡುವ ವಿಷಯ ಬಿಸಿ ಬಿಸಿ ಚರ್ಚೆಗೆ ಗ್ರಾಸವಾಯಿತು.

ಮಹಿಳೆಯರು ಒಗ್ಗಟ್ಟಾಗಿ ಸಭೆ ಸೇರಲು ಅಥವಾ ಸಾಂಸ್ಕೃತಿಕ ಕಾರ್ಯಕ್ರಮ ಸಂಘಟಿಸಲು ಸ್ಥಳಾವಕಾಶವಿಲ್ಲ. ಸರ್ಕಾರಿ ಭವನಗಳು ದುಬಾರಿ ಆಗಿವೆ. ಮಹಿಳೆಯರಿಗೆ ಸ್ಥಳೀಯ, ಸರ್ಕಾರದ ಭವನಗಳು ಸಿಗುತ್ತಿಲ್ಲ. ಮಹಿಳಾ ಸಂಘದ ಹೆಸರಿನಲ್ಲಿ ಕಟ್ಟಡ ನಿರ್ಮಾಣವಾಗುತ್ತಿದ್ದು ಅದರ ಉಪಯೋಗ ಇಲ್ಲದಂತಾಗಿದೆ ಎನ್ನುವ ವಿಷಯವೂ ಚರ್ಚೆಗೆ ಬಂದಿತು.

ಗ್ರಾಮ ಸಭೆಯ ಠರಾವುಗಳು ತಿದ್ದುಪಡಿ ಆಗುತ್ತಿದೆ. ಸಭೆಯಲ್ಲಿ ಆಗುವ ಚರ್ಚೆ ಬೇರೆ ಆದರೆ ಕೆಲಸ ಆಗುವುದೇ ಬೇರೆ ಎನ್ನುವ ವಿಚಾರವೂ ಸಭಿಕರಿಂದ ಕೇಳಿ ಬಂದಿತು. ಇದರಿಂದ ಗ್ರಾಮೀಣ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ ಎಂದು ಅನೇಕರು ತಿಳಿಸಿದರು.

ನಂತರ ಮಹಿಳೆ ಮತ್ತು ಉದ್ಯಮ ಶೀಲತೆ ಕುರಿತು ಚರ್ಚೆ ನಡೆಯಿತು. ಚರ್ಚೆಯಲ್ಲಿ ಬೆನಕಾ ಇಲೆಕ್ಟ್ರಾನಿಕ್ಸ್‌ನಿಂದ ಶ್ರೀಮತಿ ಪೂರ್ಣಿಮಾ ಭಟ್ಟ, ಹಿಮಾದ್ರಿ ಇಂಡಸ್ಟ್ರೀಸ್ ನಿಂದ ಶ್ರೀಮತಿ ವಿಜಯಶ್ರೀ ಹೆಗಡೆ, ಓಂಕಾರ ಇಂಡಸ್ಟ್ರೀಸ್ ಉದ್ಯಮಿ ಶ್ರೀ ಸತೀಶ ಹೆಗಡೆ, ಪುಷ್ಠಿ ಇಂಡಸ್ಟ್ರೀಸ್‌ನ ಶ್ರೀಮತಿ ಶಿವಾನಿ ಸಿರ್ಸಿಕರ, ರೋ. ರವಿ ಹೆಗಡೆ ಗಡಿಹಳ್ಳಿ, ಜ್ಞಾನಜ್ಯೋತಿ ಆರ್ಥಿಕ ಸಾಕ್ಷರತಾ ಕೇಂದ್ರದ ಶ್ರೀ ವಾಸುದೇವ ಶಾನಬಾಗ ಭಾಗವಹಿಸಿದ್ದರು. ಉದ್ದಿಮೆ ನಡೆಸಲು ನಾಯಕತ್ವದ ಗುಣ ಮುಖ್ಯ. ಹೆಂಡತಿಯ ಉದ್ದಿಮೆಯ ಯಶಸ್ಸಿಗೆ ಗಂಡನ ಸಹಕಾರ ಗಂಡನ ಉದ್ದಿಮೆಯ ಯಶಸ್ಸಿಗೆ ಹೆಂಡತಿಯ ಸಹಕಾರ ಇರಬೇಕು. ಉದ್ದಿಮೆ ನಡೆಸುವವರು ಹೊಸ ಹೊಸ ತಂತ್ರಜ್ಞಾನಕ್ಕೆ ಒಗ್ಗಿಕೊಂಡು ಆಧುನಿಕತೆಯನ್ನು ಅಳವಡಿಸಿ ಖರ್ಚನ್ನು ಕಡಿಮೆ ಮಾಡಬೇಕು ಎಂದು ನೆರೆದ ಮಹಿಳೆಯರಿಗೆ ತಿಳಿಸಲಾಯಿತು.

## ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ ಇವರಿಗೆ ಮಹಿಳಾ ಸಮಾವೇಶದ ಹಕ್ಕೊತ್ತಾಯಗಳು

ದಿನಾಂಕ 15.12.2018 ರಂದು ಸಿರಸಿಯ ಕರ್ಜಗಿ ಕಲ್ಯಾಣ ಮಂಟಪದಲ್ಲಿ 500 ಕ್ಕೂ ಹೆಚ್ಚು ಮಹಿಳೆಯರು ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಿಂದ ಬಂದು ಸಮಾವೇಶಗೊಂಡು ಸರ್ಕಾರಕ್ಕೆ ವಿವಿಧ ಬೇಡಿಕೆಗಳನ್ನು ಇಟ್ಟಿರುತ್ತಾರೆ.

1. ಸ್ವ-ಸಹಾಯ ಸಂಘಗಳಿಗೆ ಬ್ಯಾಂಕ್ ಮೂಲಕವೇ ಸಾಲ ಸೌಲಭ್ಯ ಒದಗಿಸಬೇಕು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಅವಲಂಬನೆ ಕಡಿಮೆ ಮಾಡಬೇಕು.
2. ಸ್ವ-ಸಹಾಯ ಸಂಘಗಳಿಗೆ ಶೇ 4 ರಷ್ಟು ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಬೇಕು.
3. ಕಳೆದ ಐದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಉತ್ತಮವಾಗಿ ಸಂಘ ನಡೆಸಿಕೊಂಡು ಬಂದಲ್ಲಿ ಅಂತಹ ಸಂಘಗಳಿಗೆ ವಾರ್ಷಿಕ 01 ಲಕ್ಷ ಪ್ರೋತ್ಸಾಹಧನ ಒದಗಿಸಬೇಕು.
4. ಅರಣ್ಯ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸಿಸುವ ಮಹಿಳೆಯರು ಕಟ್ಟಿಗೆ ಮತ್ತಿತರ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ತೆರಳಿದಾಗ ಅರಣ್ಯ ಇಲಾಖೆ ಸಿಬ್ಬಂದಿಗಳು ತೊಂದರೆ ನೀಡಬಾರದು. ಪಾರಂಪರಿಕ ಅರಣ್ಯ ಉತ್ಪನ್ನಗಳ ಸಂಗ್ರಹದ ಹಕ್ಕು ನೀಡಬೇಕು.
5. ಮನೆ ನಂಬರ್ ಇಲ್ಲದ ಮತ್ತು ಅತಿಕ್ರಮಣ ಭೂಮಿಯಲ್ಲಿ ಮನೆಕಟ್ಟಿ ವಾಸಿಸುತ್ತಿರುವ ಎಲ್ಲ ರೇಶನ್ ಕಾರ್ಡ ಹೊಂದಿರುವ ಕುಟುಂಬಗಳಿಗೆ ಮನೆ ನಂಬರ್ ನೀಡಬೇಕು.
6. ಜಮೀನು ಇಲ್ಲದೇ ಅರಣ್ಯ ಭೂಮಿ ಮತ್ತು ಸರಕಾರಿ ಭೂಮಿಯಲ್ಲಿ ಗುಡಿಸಲು ಕಟ್ಟಿ ವಾಸಿಸುತ್ತಿರುವ ಎಲ್ಲ ಕುಟುಂಬಗಳಿಗೆ ಆಶ್ರಯ ಯೋಜನೆ ಅಡಿಯಲ್ಲಿ ಮನೆ ಮಂಜೂರು ನೀಡಬೇಕು ಮತ್ತು ಜಾಗದ ರಿಕಾರ್ಡ ಕೇಳಬಾರದು.
7. ಅರಣ್ಯ ಭೂಮಿಯಲ್ಲಿ ಅನೇಕ ವರ್ಷಗಳಿಂದ ವಾಸಿಸುತ್ತಿರುವ ಕುಟುಂಬಗಳಿಗೆ ಮನೆ ರಿಪೇರಿ, ಬಾವಿ ನಿರ್ಮಾಣ ಮತ್ತು ರಸ್ತೆ ನಿರ್ಮಾಣಕ್ಕೆ ತೊಂದರೆ ನೀಡಬಾರದು.
8. ಪ್ರತೀ ತಾಲೂಕು ಮಟ್ಟದಲ್ಲಿ ಗ್ರಾಮೀಣ ಕಾಲೇಜು ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ವಿಧ್ಯಾರ್ಥಿನಿಯರ ನಿಲಯ ಪ್ರಾರಂಭಿಸಬೇಕು.
9. ಸ್ವ-ಸಹಾಯ ಸಂಘಗಳಿಗೆ ಸಭೆ ನಡೆಸಲು ಗ್ರಾಮ ಪಂಚಾಯತ, ತಾಲೂಕಾ ಪಂಚಾಯತ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸಭಾಭವನದ ವ್ಯವಸ್ಥೆ ಆಗಬೇಕು. ಅಧಿಕ ಪ್ರಮಾಣದ ಬಾಡಿಗೆ ವಿಧಿಸಬಾರದು ಮತ್ತು ಈಗಿರುವ ಸರಕಾರಿ ಸಭಾಭವನಗಳಲ್ಲಿ ಕಾರ್ಯಕ್ರಮವಿಲ್ಲದಿರುವಾಗ ತರಬೇತಿ ಮತ್ತು ಸಭೆಗಳಿಗೆ ಅನುಕೂಲ ಮಾಡಿಕೊಡಬೇಕು.
10. ಪ್ರಸ್ತುತ ಬಡಜನರಿಗೆ ಆರೋಗ್ಯವಿಮೆ ವ್ಯವಸ್ಥೆ ಇರುವುದಿಲ್ಲ. ಕಡಿಮೆ ಕಂತಿನ ಮತ್ತು ಪ್ರಸಿದ್ಧ ಖಾಸಗಿ ಆಸ್ಪತ್ರೆಗಳಲ್ಲೂ ಸೇವೆ ಸಿಗುವಂತಹ ಆರೋಗ್ಯವಿಮೆ ಪ್ರಾರಂಭಿಸಬೇಕು.
11. ಸ್ವ-ಉದ್ಯೋಗದಲ್ಲಿ ತೊಡಗಿರುವ ಮತ್ತು ವಿವಿಧ ಕಾರಣಗಳಿಂದ ಉದ್ಯೋಗದಲ್ಲಿ ನಷ್ಟ ಸಂಭವಿಸಿದಲ್ಲಿ ಅಂತಹ ಸದಸ್ಯರಿಗೆ ಪರಿಹಾರ ವಿಮೆ ಜಾರಿಗೊಳಿಸಬೇಕು.

## ಮನುವಿಕಾಸ ಸಂಸ್ಥೆಯಿಂದ ಸ್ವ-ಉದ್ಯೋಗ ತರಬೇತಿ

ಮನುವಿಕಾಸ ಸಂಸ್ಥೆ ಈಡಲ್ ಗೀವ್ ಪ್ರತಿಷ್ಠಾನದ ಸಹಕಾರದಲ್ಲಿ ಮಹಿಳೆಯರಿಗೆ ಸ್ವ-ಉದ್ಯೋಗ ತರಬೇತಿಗಳಾದ ಕಂಪ್ಯೂಟರ್, ಡ್ರೈವಿಂಗ್ ಮತ್ತು ಬ್ಯುಟಿಶಿಯನ್ ತರಬೇತಿ ಆಯೋಜಿಸುತ್ತಿದೆ. ತರಬೇತಿ ಯಲ್ಲಾಪುರ, ಕುಮಟಾ, ಮುಂಡಗೋಡ, ಹಳಿಯಾಳ, ಸಿದ್ದಾಪುರ ಮತ್ತು ಜೋಯಿಡಾ ತಾಲೂಕುಗಳಲ್ಲಿ ಪ್ರಾರಂಭವಾಗಿದೆ. ಗ್ರಾಮೀಣ ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತಿದ್ದು ಆಸಕ್ತಿಯೇ ಆಯ್ಕೆಯ ಮಾನದಂಡವಾಗಿದೆ.




ಕಂಪ್ಯೂಟರ್ ತರಬೇತಿ – ಕುಮಟಾ



ಜೋಯಿಡಾ ತಾಲ್ಲೂಕು ರಾಮನಗರದಲ್ಲಿ ನಡೆಯುತ್ತಿರುವ ಮಹಿಳೆಯರ ವಾಹನ ಚಾಲನಾ ತರಬೇತಿ.

---

ಇಪ್ಪತ್ತಕ್ಕಿಂತ ಹೆಚ್ಚಿನ ಮಹಿಳೆಯರು ತರಬೇತಿ ನಡೆಸಲು ಬೇಡಿಕೆ ಇಟ್ಟಲ್ಲಿ ತರಬೇತಿ ಹಮ್ಮಿಕೊಳ್ಳಲಾಗುತ್ತದೆ. ತರಬೇತಿ ಸಂಪೂರ್ಣ ಉಚಿತವಾಗಿರದೇ ಸ್ವಲ್ಪ ಪ್ರಮಾಣದ ತರಬೇತಿ ಶುಲ್ಕ ನಿಡಬೇಕಾಗುತ್ತದೆ.

ಮಹಿಳೆಯರಿಗೆ ಹೊಲಿಗೆ ತರಬೇತಿ ಕೂಡ ಲಭ್ಯವಿದೆ. ಕೌಶಲ್ಯ ತರಬೇತಿಯೊಂದಿಗೆ ಉದ್ಯಮ ಶೀಲತಾ ತರಬೇತಿಯನ್ನೂ ನೀಡಲಾಗುತ್ತಿದೆ.

ಉದ್ಯಮಶೀಲತಾ ತರಬೇತಿಯಲ್ಲಿ ಉದ್ಯಮದ ಪರಿಕಲ್ಪನೆ, ಉದ್ಯಮಶೀಲ ವ್ಯಕ್ತಿಯ ಗುಣ ಲಕ್ಷಣಗಳು, ಮಾರುಕಟ್ಟೆ, ಬೆಲೆ ನಿರ್ಧಾರ ಇತ್ಯಾದಿ ವಿಷಯಗಳನ್ನು ತಿಳಿಸಲಾಗುತ್ತದೆ.

ಆಸಕ್ತಿಯಿದ್ದಲ್ಲಿ ಮನುವಿಕಾಸ ಸಂಸ್ಥೆಯನ್ನು ಸಂಪರ್ಕಿಸಬಹುದು. ಸಂಪರ್ಕ ಸಂಖ್ಯೆ: **9845982552**

## ಮನುವಿಕಾಸ ಸಂಸ್ಥೆಯೊಂದಿಗೆ ಎಚ್ ಡಿ ಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ಒಪ್ಪಂದ

**20 ದೊಡ್ಡ ಕೆರೆಗಳು, 100 ಕೃಷಿ ಹೊಂಡಗಳು, 35 ಬೆಟ್ಟದ ಕೆರೆಗಳು ಮತ್ತು 3000 ಇಂಗು ಗುಂಡಿ ನಿರ್ಮಾಣದ ಗುರಿ.** ಮನುವಿಕಾಸ ಸಂಸ್ಥೆಯೊಂದಿಗೆ ಕಳೆದ ವರ್ಷದಿಂದ ಒಪ್ಪಂದ ಮಾಡಿಕೊಂಡಿರುವ ಎಚ್.ಡಿ.ಬಿ. ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್ ಈ ವರ್ಷ ರೈತರ ಸಹಕಾರದಲ್ಲಿ 20 ದೊಡ್ಡ ಕೆರೆಗಳು, 100 ಕೃಷಿ ಹೊಂಡಗಳು, 35 ಬೆಟ್ಟದ ಕೆರೆಗಳು ಮತ್ತು 3000 ಇಂಗು ಗುಂಡಿ ನಿರ್ಮಾಣಕ್ಕೆ ಆರ್ಥಿಕ ಸಹಕಾರ ನೀಡಲು ಒಪ್ಪಂದ ಮಾಡಿಕೊಂಡಿದೆ. ಈಗಾಗಲೇ ಶಿರಸಿ ತಾಲೂಕಿನ ಸಂತೊಳ್ಳಿ, ಅಂಡಗಿ ಮತ್ತು ಕಲಕರಡಿ ಭಾಗಗಳಲ್ಲಿ ಕೆರೆ ನಿರ್ಮಾಣ ಪ್ರಾರಂಭವಾಗಿದೆ. ಸಂಸ್ಥೆಯು ಸೊರಬ, ಸಿರಸಿ, ಹಾನಗಲ್ ಮತ್ತು ಮುಂಡಗೋಡ ತಾಲೂಕುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈಗಾಗಲೇ ಸಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ತಾಲೂಕಿನಲ್ಲಿ ಕೃಷಿ ಹೊಂಡ, ಬೆಟ್ಟದಲ್ಲಿ ನೀರಿಂಗಿಸುವ ಘಟಕಗಳು ಮತ್ತು ಇಂಗುಗುಂಡಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಬೆಟ್ಟದ ಕೆರೆ ಹೊರತು ಪಡಿಸಿ ಬೇರೆ ಎಲ್ಲ ಮಾದರಿಗಳಿಗೆ ರೈತರು ವಂತಿಗೆ ನೀಡಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಸ್ಥೆಯ ಮಂಜುನಾಥ ಹೆಗಡೆ ದೂರವಾಣಿ ಸಂಖ್ಯೆ: **9449453774** ಗೆ ಸಂಪರ್ಕಿಸಬಹುದಾಗಿದೆ.



ಸಂತೊಳ್ಳಿ ಕೆರೆ ಕಾಮಗಾರಿ ಪೂರ್ವ





ಸಂತೊಳ್ಳಿ ಕೆರೆ ಕಾಮಗಾರಿ ಪೂರ್ಣಗೊಂಡಿರುವುದು

## ಮನುವಿಕಾಸ ಸಂಸ್ಥೆಗೆ ಯೆಸ್ ಫೌಂಡೇಶನ್ ಪ್ರಶಸ್ತಿಯ ಗರಿ

ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ಪ್ರಾರಂಭವಾಗಿ ಉತರ ಕನ್ನಡ ಮತ್ತು ಅಕ್ಕ ಪಕ್ಕದ ಜಿಲ್ಲೆಗಳಲ್ಲೂ ಕೆಲಸ ನಿರ್ವಹಿಸುತ್ತಿರುವ ಮನುವಿಕಾಸ ಸಂಸ್ಥೆ, ಸಿರಸಿ ಇವರಿಗೆ ದೇಶದ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾದ ಯೆಸ್ ಬ್ಯಾಂಕಿನ ಅಂಗ ಸಂಸ್ಥೆಯಾದ ಯೆಸ್ ಫೌಂಡೇಶನ್ ಕೊಡಮಾಡುವ ಯೆಸ್ ಆಯ್ ಆಮ್ ದಿ ಚೇಂಜ್ ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿಗೆ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಂಘ ಸಂಸ್ಥೆಗಳು ಮತ್ತು ಕಂಪನಿಗಳು ಮೂರು ನಿಮಿಷದ ವಿಡಿಯೋವನ್ನು ಕಳಿಸುವ ಮೂಲಕ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು. ಸುಮಾರು 11,500 ಕ್ಕೂ ಹೆಚ್ಚು ಸಂಘ ಸಂಸ್ಥೆಗಳು, ವಿದ್ಯಾ ಕೇಂದ್ರಗಳು, ಆಸ್ಪತ್ರೆಗಳು ಮತ್ತು ಕಂಪನಿಗಳು ತಮ್ಮ ಸಾಧನೆಯನ್ನು ವಿಡಿಯೋ ಮೂಲಕ ಕಳಿಸಿದ್ದವು. ಅದರಲ್ಲಿ ಆಯ್ದ 750 ಕ್ಕೂ ಹೆಚ್ಚು ಸಂಘ ಸಂಸ್ಥೆಗಳಿಗೆ ವಿವಿಧ ದಾಖಲೆ ಪರೀಶೀಲಿಸಿ ಆಯ್ದ 60 ಸಂಸ್ಥೆಗಳಿಗೆ ಮುಂಬೈನಲ್ಲಿ 2 ದಿನಗಳ ಕಾಲ ಉನ್ನತ ಮಟ್ಟದ ಸಮಿತಿಯ ಎದುರು ತಮ್ಮ ಕೆಲಸ ಕಾರ್ಯದ ಕುರಿತು ಮತ್ತು ಮುಂದಿನ ಯೋಜನೆ ಕುರಿತು ವಿವಿದ ಹಂತಗಳಲ್ಲಿ ನಿರೂಪಣೆ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ನಂತರ ಯೆಸ್ ಫೌಂಡೇಶನ್ ಅಧಿಕಾರಿಗಳು ಕ್ಷೇತ್ರ ಭೇಟಿ ನೀಡಿ 25 ಸಂಘ ಸಂಸ್ಥೆಗಳಿಗೆ ಪ್ರಶಸ್ತಿ ಪ್ರಧಾನ ಮಾಡಿದ್ದಾರೆ. ಪ್ರಶಸ್ತಿಯು 30 ಲಕ್ಷ ಅನುದಾನದ ಮೊತ್ತ ಒಳಗೊಂಡಿದೆ. ಇದರೊಂದಿಗೆ ಮೂರು ವರ್ಷಗಳ ಕಾಲ ಸಂಸ್ಥೆಗೆ ದಾಖಲಾತಿ ನಿರ್ವಹಣೆ ಹಾಗೂ ತರಬೇತಿಗೆ ವಿವಿಧ ಸಂಸ್ಥೆಗಳಿಂದ ಅನುದಾನ ಪಡೆಯುವಲ್ಲಿ ಸಹಕಾರ ಸಿಗಲಿದೆ.



ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ

ದಿನಾಂಕ 19.09.2018 ರಂದು ಮುಂಬೈನ ಇಂಡಿಯಾ ಬುಲ್ ಕೋಲಬ್ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ ಭಟ್ಟ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ರಿಪಬ್ಲಿಕ್ ಟಿ. ವಿ. ಮುಖ್ಯಸ್ಥ ಶ್ರೀ ಅರನಬ್ ಗೋಸ್ವಾಮಿ, ಝೀ ವಾಹಿನಿ ಮುಖ್ಯಸ್ಥ ಡಾ. ಸುಭಾಷಚಂದ್ರ, ಮಹಾರಾಷ್ಟ್ರ ಮುಖ್ಯಮಂತ್ರಿಗಳ ಧರ್ಮಪತ್ನಿ ಶ್ರೀಮತಿ ಅಮೃತಾ ಫಡ್ನವೀಸ್, ಯೆಸ್ ಬ್ಯಾಂಕಿನ ಮುಖ್ಯಸ್ಥೆ ಶ್ರೀಮತಿ ನಮಿತಾ ಕಪೂರ್ ಇನ್ನಿತರರು ಭಾಗವಹಿಸಿದ್ದರು. ಕರ್ನಾಟಕ ರಾಜ್ಯದ ಎರಡು ಸಂಸ್ಥೆಗಳು ಮಾತ್ರ ಆಯ್ಕೆ ಆಗಿದ್ದು ನಮ್ಮ ಜಿಲ್ಲೆಗೆ ಪ್ರಶಸ್ತಿ ಬಂದಿರುವುದು ಸಂತಸ ತಂದಿದೆ ಎಂದು ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ಫೆವರ್ಡ ದ ಜಿಲ್ಲಾಧ್ಯಕ್ಷರಾದ ಶ್ರೀ ಲೂಯಿಸ್ ಫೆರೆರೊ ಸಂತಸ ವ್ಯಕ್ತಪಡಿಸಿದ್ದಾರೆ. ದೇಶಪಾಂಡೆ ಪ್ರತಿಷ್ಠಾನದ ಅನುದಾನ ವಿಭಾಗದ ಅಧಿಕಾರಿ ಶ್ರೀ ಸಂಜೀವ ಕುಲಕರ್ಣಿ ನಮ್ಮ ಫೌಂಡೇಷನ್ ನೊಂದಿಗೆ ಕಳೆದ ಆರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಮನುವಿಕಾಸ ಸಂಸ್ಥೆ ಉತ್ತಮ ಕೆಲಸ ನಿರ್ವಹಿಸುತ್ತಿದ್ದು ಯೋಗ್ಯ ಸಂಸ್ಥೆಗೆ ಪ್ರಶಸ್ತಿ ಸಂದಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಮನುವಿಕಾಸ ಸಂಸ್ಥೆ ಸಂಸ್ಥಾಪಕರಾದ ಹರಿಶ್ಚಂದ್ರ ಭಟ್ಟ ಪ್ರಶಸ್ತಿಯಿಂದ ಬಂದ ಹಣದಿಂದ ಜಿಲ್ಲೆಯಲ್ಲಿ ಕೆರೆ ಅಭಿವೃದ್ಧಿ ಮಾಡುವುದಾಗಿ ತಿಳಿಸಿದ್ದಾರೆ.



# ರಚನಾತ್ಮಕ ಚಟುವಟಿಕೆಗೆ ಶಿರಸಿ ತಾಲೂಕು ಮಾದರಿ

ರಚನಾತ್ಮಕ ಚಟುವಟಿಕೆಗೆ ಹೆಸರುವಾಸಿಯಾದ ಉತ್ತರಕನ್ನಡ ಜಿಲ್ಲೆಯಲ್ಲಿ ಶಿರಸಿ ತಾಲೂಕು ಮಾದರಿಯಾಗಿದೆ ಎಂದು ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಅವರು ಸೋಮವಾರ ಶಿರಸಿಯ ರೋಟರಿ ಸೆಂಟರ್‌ನಲ್ಲಿ ಮನುವಿಕಾಸ ಸಂಸ್ಥೆಯ “ಮನುವಿಕಾಸ ತ್ರೈಮಾಸಿಕ ವಾರ್ತಾಪತ್ರಿಕೆ” ಬಿಡುಗಡೆಗೊಳಿಸಿ ಮಾತನಾಡಿದರು.

ಒಳ್ಳೆಯ ಕೆಲಸಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಜನರು ನಮ್ಮಲ್ಲಿದ್ದಾರೆ. ಮನುವಿಕಾಸದ ಗುಣಮಟ್ಟದ ಕೆಲಸಕ್ಕೆ ಮೆಚ್ಚಿ ಬಹುತೇಕ ಸಂಘ–ಸಂಸ್ಥೆಗಳು ಕೈ ಜೋಡಿಸಿರುವುದು ಸಂತಸದ ಸಂಗತಿಯಾಗಿದೆ. ಮನುವಿಕಾಸ ಶಿರಸಿಗೆ ಹೆಮ್ಮೆ ತರುವ ಯೋಜನೆಗಳನ್ನು ರೂಪಿಸುತ್ತಿದೆ. ಶಿರಸಿ ಮಾತ್ರವಲ್ಲದೆ ಹೊರ ಜಿಲ್ಲೆಗಳಲ್ಲಿಯೂ ಸಂಸ್ಥೆಯಿಂದ ಉತ್ತಮ ಕೆಲಸ, ಕಾರ್ಯಗಳು ನಡೆಯುತ್ತಿವೆ ಎಂದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ.ಭಟ್ಟ ಮಾತನಾಡಿ, ರೈತರ ಅಭಿವೃದ್ಧಿಗಾಗಿ ಕೃಷಿಗೆ ಅನುಕೂಲವಾಗುವಂತಹ 3000ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ಮನುವಿಕಾಸ ಸಂಸ್ಥೆಯು ನಿರ್ಮಿಸಿದೆ. ವಾರ್ಷಿಕವಾಗಿ 2 ಕೋಟಿಯಷ್ಟು ವ್ಯವಹಾರ ನಡೆಸುತ್ತಿದೆ. ಮಹಿಳೆಯರ ಸ್ವ–ಉದ್ಯೋಗಕ್ಕೆ ಪ್ರೋತ್ಸಾಹ ನೀಡುತ್ತ, ಸಮಾಜದ ಎಲ್ಲ ವರ್ಗದ ಜನಸಾಮಾನ್ಯರ ಏಳ್ಗೆಗೂ ಸಂಸ್ಥೆ ಶ್ರಮಿಸುತ್ತಿದೆ ಎಂದರು. ರೋಟರಿ ಕ್ಲಬ್‌ನ ಶ್ರೀ ಆರ್. ಎ ಖಾಜಿ, ದೇಶಪಾಂಡೆ ಪ್ರತಿಷ್ಠಾನದ ಶ್ರೀ ಸಂಜೀವ ಕುಲಕರ್ಣಿ, ಶ್ರೀ ಹರಿಶ್ಚಂದ್ರ ಭಟ್ ಹಾಗೂ ಇತರರು ಉಪಸ್ಥಿತರಿದ್ದರು.




ಮೊದಲ ವಾರ್ತಾ ಸಂಚಿಕೆ ಬಿಡುಗಡೆ ಸಮಾರಂಭದ ಶುಭ ಘಳಿಗೆ





ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳ ತರಬೇತಿ ಕಾರ್ಯಕ್ರಮವನ್ನು ಸಿರಸಿಯ ಮಧುವನ ಹೋಟೆಲ್ ಸಭಾಂಗಣದಲ್ಲಿ ಸಪ್ಟೆಂಬರ್ 5 ಮತ್ತು 6 ರಂದು ಹಮ್ಮಿಕೊಳ್ಳಲಾಗಿತ್ತು.



ಕಾಮಗಾರಿಯ ಮೊದಲು ಅಂಡಗಿ ಕೆರೆ



ಕಾಮಗಾರಿ ಪೂರ್ಣಗೊಂಡಿರುವುದು.



ಕಾಮಗಾರಿ ಹಂತದಲ್ಲಿರುವ ಅಂಡಗಿ ಕೆರೆ

## "ಪ್ರಗತಿಮಿತ್ರ ಸೌಹಾರ್ದ ಸಹಕಾರಿ ನಿಯಮಿತ, ಸಿದ್ದಾಪುರ- 2 ನೇ ವರ್ಷದಲ್ಲೇ 1.32 ಲಕ್ಷ ಲಾಭ




ಶಿರಸಿ. ಸೆ **20-2018** : ಪ್ರಗತಿಮಿತ್ರ ಸೌಹಾರ್ದ ಸಹಕಾರಿ ನಿಯಮಿತ , ಸಿದ್ದಾಪುರ ಪ್ರಾರಂಭವಾದ ಎರಡನೇ ವರ್ಷದಲ್ಲಿಯೇ ಸುಮಾರು ರೂ **1,78,13,367/-**ಗಳಷ್ಟು ಸಾಲ ನೀಡಿ ಶೇ. **100** ರಷ್ಟು ಮರುಪಾವತಿ ಸಾಧಿಸಿ **31/ 03/ 2018** ನೇ ಸಾಲಿನ ಅಂತ್ಯಕ್ಕೆ **1,32,151/-** ರೂಗಳ ನಿವ್ವಳ ಲಾಭ ಗಳಿಸಿರುತ್ತದೆ.

ಕರ್ಜಗಿ ಕಲ್ಯಾಣ ಮಂಟಪ ಶಿರಸಿಯಲ್ಲಿ ಪ್ರಗತಿಮಿತ್ರ ಸೌಹಾರ್ದ ಸಹಕಾರಿ ನಿಯಮಿತ ಇದರ **2**ನೇ ವಾರ್ಷಿಕ ಸರ್ವಸಾಧಾರಣ ಸಭೆಯು ನಡೆಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಭಾಧ್ಯಕ್ಷರಾದ ಶ್ರೀ ವಿವೇಕ ಹೆಗಡೆ, ಬಾಳೇಗದ್ದೆ ಸಹಕಾರಿಯಲ್ಲಿ ಸುಮಾರು **2425** ಸದಸ್ಯರುಗಳಿದ್ದು ಇವರು ಅನೇಕತೆಯಲ್ಲಿ ಏಕತೆಯ ಪ್ರತಿಬಿಂಬ ಎಂದು ಪ್ರತಿಪಾದಿಸಿದರು. ಆರ್ಥಿಕ ಸಧೃಡತೆ ಹೊಂದುವ ನಿಟ್ಟಿನಲ್ಲಿ ಆದಾಯ ಉತ್ಪನ್ನ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಮಹಿಳಾ ಗುಂಪುಗಳು ಮತ್ತು ವ್ಯಕ್ತಿಗಳಿಗೆ ಸರಳವಾದ ಆರ್ಥಿಕ ನೆರವು ನೀಡುವುದೇ ಸಹಕಾರಿಯ ಧ್ಯೇಯ ಎಂಬುದಾಗಿ ತಿಳಿಸಿದರು. ಸಹಕಾರಿಯ ಸರ್ವತೋಮುಖ ಅಭಿವೃದ್ಧಿಯಲ್ಲಿ" ಮನುವಿಕಾಸ" ಸಂಸ್ಥೆಯ ನೆರವು ಮತ್ತು ಸಹಕಾರವನ್ನು ಸ್ಮರಿಸಿದರು.

ಕಾರ್ಯಕ್ರಮದ ಉಧ್ಘಾಟಕರಾದ ಶ್ರೀ. ಹರಿಶ್ಚಂದ್ರ ಭಟ್ ಕರ್ಜಗಿ, ಸಂಸ್ಥಾಪಕ ಅಧ್ಯಕ್ಷರು, ಮನುವಿಕಾಸ ಮಾತನಾಡಿ "ಸದಸ್ಯರ ಸಹಕಾರವೇ ಸಂಸ್ಥೆಯ ಬೆಳವಣಿಗೆಯ ನಾಡಿ" ಸಂಸ್ಥೆಗೆ ಸದಸ್ಯರ ಉತ್ತಮ ಸಹಕಾರ ದೊರೆತಿದೆ ಮುಂದೆಯೂ ಹೆಚ್ಚಿನ ಸಹಕಾರ ಮತ್ತು ಪಾಲುದಾರಿಕೆ ದೊರೆಯಲಿ ಮತ್ತು ಸಧೃಡತೆಯತ್ತ ಸಂಸ್ಥೆ ಸಾಗಲಿ ಎಂದು ಆಶಿಸಿದರು. ಸಭೆಯಲ್ಲಿ ಹಾಜರಿದ್ದ ಸಹಕಾರಿಯ ಎಲ್ಲ ನಿರ್ದೇಶಕರುಗಳು ತಮ್ಮ ಅಮೂಲ್ಯವಾದ ಸಲಹೆ ಸೂಚನೆ ನೀಡಿದರು. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ. ವಿನಯ ನಾಯ್ಕ ಮೂಡಗಾರ್ **2017-18** ನೇ ಸಾಲಿನ ವರದಿ ವಾಚಿಸಿ ಎಲ್ಲಾ ಸದಸ್ಯರು ಮತ್ತು ನಿರ್ದೇಶಕರ ಸಮ್ಮುಖದಲ್ಲಿ ಅಡಾವೆಗೆ ಅನುಮೋದನೆಯನ್ನು ಪಡೆದರು.

---

## ಪ್ರಗತಿಮಿತ್ರ ನಾರ್ಥ ಕೆನರಾ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ 2ನೇ ವರ್ಷದ ಸರ್ವಸಾಧಾರಣ ಸಭೆ 2018-19

ದಿನಾಂಕ 29-09-2018 ಶನಿವಾರದಂದು ರೋಟರಿ ಭವನದಲ್ಲಿ 2ನೇ ವರ್ಷದ ಸರ್ವಸಾಧಾರಣ ಸಭೆ ಜರುಗಿತು. ಸಭೆಯನ್ನು ಉಧ್ಘಾಟಿಸಿದ ನಬಾರ್ಡ್ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಎಸ್.ಎಲ್. ಯೋಗೇಶ್ ಅವರು ಮಾತನಾಡಿ ಕಂಪನಿಯು ಪ್ರಗತಿಯಲ್ಲಿದೆ, ಶೇರು ಸದಸ್ಯರೆಲ್ಲಾ ಕೈ ಜೋಡಿಸಿದರೆ ಕಂಪನಿ ಇನ್ನಷ್ಟೂ ಅಭಿವೃದ್ಧಿಗೊಳ್ಳಲು ಸಾಧ್ಯವೆಂದರು ಹಾಗೂ ಸರ್ಕಾರದ ಅನುದಾನದ ಬಗ್ಗೆ ಮಾಹಿತಿ ನೀಡಿದರು. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಇವರು ಅತಿಥಿಯಾಗಿ ಆಗಮಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಮನುವಿಕಾಸದ ಕಾರ್ಯವೈಖರಿ ಹಾಗೂ ಕಂಪನಿಯ ಕಾರ್ಯವೈಖರಿಯನ್ನು ವಿವರಿಸಿ ತಮ್ಮೆಲ್ಲರ ಸಹಕಾರ ಅಗತ್ಯವೆಂದರು. ಇನ್ನೋರ್ವ ಅತಿಥಿಯಾಗಿ ಆಗಮಿಸಿದ ಲೀಡ್ ಡಿಸ್ಟ್ರಿಕ್ ಮ್ಯಾನೆಜರ್ ಶ್ರೀ ಪಿ.ಎಮ್ ಪಿಂಜಾರ ಅವರು ಮಾತನಾಡಿ ಕಂಪನಿಗೆ ಶುಭಕೋರಿದರು. ಕಂಪನಿಯ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರ ಭಟ್ಟ ಸಭೆಯ ಅಧ್ಯಕ್ಷತೆವಹಿಸಿ ಕಂಪನಿಯ ಕಾರ್ಯವೈಖರಿ, ಕಂಪನಿಯ ಚಟುವಟಿಕೆಗಳು, ಹಾಗೂ ಕಂಪನಿಯಿಂದ ಸದಸ್ಯರಿಗೆ ಆಗುವ ಲಾಭಗಳ ಬಗ್ಗೆ ವಿವರಿಸಿದರು. ಈಗಾಗಲೇ ಸುಮಾರು 200 ಶೇರು ಸದಸ್ಯರು ಕಂಪನಿಯ ಚಟುವಟಿಕೆಯಲ್ಲಿ ಭಾಗವಹಿಸಿ ಲಾಭ ಪಡೆದಿರುವುದಾಗಿ ತಿಳಿಸಿದರು. ಕಂಪನಿಯ ಉಪಾಧ್ಯಕ್ಷರಾದ ಶ್ರೀ ವಿವೇಕ ಹೆಗಡೆ ಅವರು ವಾರ್ಷಿಕ ವರದಿ ವಾಚಿಸಿದರು. ಅಲ್ಲದೆ ಶೇರು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನು ನೀಡಿ, ಸದಸ್ಯರ ಸಲಹೆ-ಸೂಚನೆಯನ್ನು ಆಲಿಸಿ, ಅದನ್ನು ಮುಂದಿನ ದಿನಗಳಲ್ಲಿ ಕಂಪನಿಯು ಅಳವಡಿಸಿಕೊಳ್ಳುವುದಾಗಿ ಹೇಳಿದರು. ಕಂಪನಿಯು ಆಧುನಿಕ ಉಪಕರಣಗಳನ್ನು ಅಳವಡಿಸಿಕೊಂಡು ರಿಯಾಯಿತಿ ದರದಲ್ಲಿ ಚಾಲಿ ಅಡಿಕೆ ಸುಲಿಯುವಿಕೆ ಹಾಗೂ ಅಡಿಕೆ ಸಂಸ್ಕರಣಾ ಕೇಂದ್ರದಲ್ಲಿ ರೈತರಿಗೆ ಅನುಕೂಲಕರವಾಗುವ ರೀತಿಯಲ್ಲಿ ಅಡಿಕೆ ಸಂಸ್ಕರಿಸಿ ಕೊಡುವುದಾಗಿ ತಿಳಿಸಿದರು. ಕಂಪನಿಯ ನಿರ್ದೇಶಕರುಗಳಾದ ಶ್ರೀ ಸುರೇಶ ಎಮ್. ಹೆಗಡೆ ಹಾಗೂ ಶ್ರೀಮತಿ ಲೀಲಾವತಿ ನಾಯ್ಕ ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಂಸ್ಥಾಪನಾ ಸದಸ್ಯರುಗಳಾದ ಶ್ರೀ ಕೇಶವ ಶಿವರಾಮ ಜೋಶಿ, ಶ್ರೀ ಅನಂತ ವೆಂಕಟ್ರಮಣ ಭಟ್ಟ, ಶ್ರೀಮತಿ ಪ್ರಭಾ ಶಂಕರನಾರಾಯಣ ಭಟ್ಟ, ಶ್ರೀ ನಾಗರಾಜ ಲಕ್ಷ್ಮೀನಾರಾಯಣ ಹೆಗಡೆ ಸಭೆಯಲ್ಲಿ ಹಾಜರಿದ್ದರು.



# ಅರಣ್ಯದಲ್ಲಿ ಕಪ್ಪು ಬಂಗಾರ ಬೆಳೆದ ರೈತ

ಶ್ರೀ ನಾಗಪತಿ ಹೆಗಡೆ ಇವರು ಮೂಲತಃ ಕೃಷಿ ಕುಟುಂಬದವರಾಗಿದ್ದು ಶಿರಸಿ ತಾಲೂಕಿನ ದಾನಂದಿ ಗ್ರಾಮದ ನಿವಾಸಿಯಾಗಿದ್ದಾರೆ.

ಇವರು ಪ್ರಮುಖವಾಗಿ ಅಡಿಕೆ, ಕಾಳುಮೆಣಸು ಮತ್ತು ಬಾಳೆಯನ್ನು ಬೆಳೆಯುತ್ತಾರೆ. ಇವರು 2.5 ಎಕರೆ ಯಷ್ಟು ಜಮೀನನ್ನು ಹೊಂದಿದ್ದು, ಇವರ ವಾರ್ಷಿಕ ಆದಾಯ 5 ಲಕ್ಷ. ಆದರೆ ಇವರ ಒಣ ಭೂಮಿಯಲ್ಲಿ ಕೃಷಿಯು ನಿಧಾನಗತಿಯಲ್ಲಿ ಸಾಗುತ್ತಿತ್ತು. ಸಾಕಷ್ಟು ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದರು. ಸುತ್ತಮುತ್ತಲಿನ ರೈತರು ಉತ್ತಮ ಇಳುವರಿಗಾಗಿ ಬೋರ್‌ವೆಲ್ ನೀರನ್ನು ಅವಲಂಬಿಸಿದ್ದರು. ಆದರೆ ನಾಗಪತಿಯವರು ಬೋರ್‌ವೆಲ್ ನೀರಾವರಿಯಲ್ಲಿ ನಿರಾಸಕ್ತಿಯನ್ನು ಹೊಂದಿದ್ದರು. ಕಳೆದ 4–5 ವರ್ಷಗಳಿಂದ ಮಳೆಯ ಪ್ರಮಾಣ ಕಡಿಮೆಯಾಗಿ ನೀರಿನ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಮನುವಿಕಾಸ ಸಂಸ್ಥೆಯ ನೆರವಿನಿಂದ ಹಲವಾರು ಕೃಷಿ ಹೊಂಡಗಳನ್ನು ನಿರ್ಮಿಸಿ ಈಗ ಉತ್ತಮ ಕೃಷಿ ನೀರಾವರಿ ಭೂಮಿಯೊಂದಿಗೆ ಒಳ್ಳೆಯ ಇಳುವರಿಯನ್ನು ಪಡೆಯುತ್ತಿದ್ದಾರೆ. ಇವರು ಹೆಚ್ಚು ಮೇಲ್ಮೈ ನೀರಿನ ಸಂರಕ್ಷಣೆಯನ್ನು ಮಾಡಬೇಕೆಂದು ಒತ್ತು ನೀಡುತ್ತಾರೆ. ಕಾಳುಮೆಣಸನ್ನು ಬೆಳೆಯುವಲ್ಲಿ ಉಳಿದ ರೈತರಿಗೆ ಮಾದರಿಯಾಗಿದ್ದಾರೆ. 160 ಕಾಳುಮೆಣಸಿನ ಬಳ್ಳಿಗಳನ್ನು ಹೊಂದಿದ್ದು ಸರಿಸುಮಾರು 500 ಕೆ.ಜಿ ಇಳುವರಿಯನ್ನು ಪಡೆಯುತ್ತಿದ್ದಾರೆ. ಆರಂಭದಲ್ಲಿ ಇವರು ಪ್ರಾಣಿಗಳ ಮೇಯಿಸುವಿಕೆಗಾಗಿ ಮತ್ತು ಉರುವಲು ಸಂಗ್ರಹಕ್ಕಾಗಿ ತಮ್ಮ ಬೆಟ್ಟವನ್ನು ಬಳಸುತ್ತಿದ್ದು, ಈಗ ತಮ್ಮ ಬೆಟ್ಟ ಭೂಮಿಯಲ್ಲಿರುವ ಸಸ್ಯಗಳಲ್ಲಿ ಕಾಳು ಮೆಣಸಿನ ಬಳ್ಳಿಗಳನ್ನು ಬೆಳೆಯುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಹೈಬ್ರಿಡ್ ಕಾಳುಮೆಣಸಿನ ಬಳ್ಳಿಗಳನ್ನು ಬೆಳೆಸಿ 150 ಬಳ್ಳಿಗಳಿಂದ ಸುಮಾರು 5 ಕ್ವಿಂಟಾಲ್ ಇಳುವರಿಯನ್ನು ಪಡೆದಿದ್ದರು. ಆದರೆ ಸೋಂಕಿನಿಂದ ಕಾಳುಮೆಣಸಿನ ಬಳ್ಳಿಗಳನ್ನು ರಕ್ಷಿಸಲು ತುಂಬಾ ಹಣ ವ್ಯಯ ಮಾಡಬೇಕಾಯಿತು. ಆದರೂ ಛಲ ಬಿಡದೆ ಪುನಃ ಬೇರೆ ತಳಿಯ ಬಳ್ಳಿಗಳನ್ನು ಬೆಳೆಸಿ, ಈಗ 400 ಹೊಸ ತಳಿಯ ಬಳ್ಳಿಗಳನ್ನು ಬೆಳೆಸಿದ್ದಾರೆ. ರೋಗ ತಡೆಗೆ ಗೋಮೂತ್ರ ಮತ್ತು ಸೆಗಣಿಯನ್ನು ಬಳಸುತ್ತಾರೆ. ತಮ್ಮ ತಂದೆಯ ಸಲಹೆ ಮತ್ತು ಆಧುನಿಕ ಕೃಷಿ ಯಂತ್ರದ ಸಹಾಯದಿಂದ ಹೆಚ್ಚಿನ ಕೆಲಸಗಾರರನ್ನು ಅವಲಂಬಿಸದೆ ತಾವೇ ಸ್ವತಃ ಎಲ್ಲ ಕೆಲಸಗಳನ್ನು ನಿರ್ವಹಿಸುತ್ತಾರೆ. ಇವರು ಕಾಳುಮೆಣಸಿನ ಬಳ್ಳಿಗಳಿಗೆ ಹಾಕುವ ಗೊಬ್ಬರದಿಂದಾಗಿ ಅಡಿಕೆ ಮರಗಳೂ ಒಳ್ಳೆಯ ಪೌಷ್ಠಿಕಾಂಶವನ್ನು ಪಡೆದು ಒಳ್ಳೆಯ ಇಳುವರಿಯನ್ನು ನೀಡುತ್ತಿವೆ. ಬಾಳೆ ಗಿಡಗಳಿಂದಲೂ ಕೂಡ ಸ್ವಲ್ಪ ಪ್ರಮಾಣದ ಆದಾಯವನ್ನು ಪಡೆಯುತ್ತಿದ್ದಾರೆ.ಇವರು ಕೃಷಿಯಿಂದಾಗಿ ಉತ್ತಮ ಜೀವನವನ್ನು ಮತ್ತು ಒಳ್ಳೆಯ ಆದಾಯವನ್ನು ಪಡೆಯುತ್ತಿದ್ದಾರೆ ಮತ್ತು ಅವರ ಮಗನನ್ನು ಒಳ್ಳೆಯ ವಿದ್ಯಾಭ್ಯಾಸದೊಂದಿಗೆ ಕೃಷಿಯಲ್ಲಿ ತೊಡಗಿಸುವುದಾಗಿ ತಿಳಿಸಿದ್ದಾರೆ. ಅವರ ಯಶಸ್ಸಿಗೆ ಕಾರಣ "ನೀರಿನ ಸಂರಕ್ಷಣೆ." ಇವರು ಮನುವಿಕಾಸ ಸಂಸ್ಥೆಯ ಸಹಾಯದಿಂದಾಗಿ 04 ಬೆಟ್ಟದ ಕೆರೆಗಳನ್ನು ಮತ್ತು 300 ಇಂಗು ಗುಂಡಿಯನ್ನು ನಿರ್ಮಿಸಿದ್ದು, ನೀರಿನ ಸಂರಕ್ಷಣೆಗಾಗಿ ತಮ್ಮನ್ನು ಬೆಂಬಲಿಸಿದ ಮನುವಿಕಾಸ ಸಂಸ್ಥೆಗೆ ತಮ್ಮ ಕೃತಜ್ಞತೆಯನ್ನು ತಿಳಿಸಿದ್ದಾರೆ.







# ಸ್ವ ಉದ್ಯೋಗದತ್ತ ಮಹಿಳೆಯರ ದಾಪುಗಾಲು

**ಸಂಘದ ಹೆಸರು :** ಶ್ರೀ ಲಕ್ಷ್ಮೀ ಜಂಟಿ ಬಾಧ್ಯತಾ ಸಂಘ, ಕುಂಬ್ರಿಕೊಡ್ಲು, ಸಿದ್ದಾಪುರ
**ಸಂಘದ ಚಟುವಟಿಕೆ :** ಬ್ಯಾಗ್ ತಯಾರಿಸುವುದು, ಹೊಲಿಗೆ, ಅಡಿಕೆ ಮತ್ತು ಬಾಳೆ ಬೆಳೆಯುವುದು, ನರ್ಸರಿ.

ಈ ಸಂಘವು 5 ಜನ ಸದಸ್ಯರನ್ನು ಹೊಂದಿದ್ದು, ಈ ಎಲ್ಲಾ ಮಹಿಳೆಯರೂ ಹಿಂದುಳಿದ ವರ್ಗದವರೇ ಆಗಿದ್ದಾರೆ. ಪ್ರಗತಿ ಮಿತ್ರ ಸೌಹಾರ್ದ ಸಹಕಾರಿಯು ಇಂತಹ ಮಹಿಳಾ ಸಂಘಗಳನ್ನು ಹುಡುಕಿ ಅವರನ್ನು ಆದಾಯ ತರುವ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದೆ. ಪ್ರಾರಂಭದಲ್ಲಿ 2,50,000 ರೂ. ಸಾಲವನ್ನು 2 ವರ್ಷದ ಅವಧಿಗೆ ನೀಡಿ ಅವರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಯಶಸ್ವಿಯಾಗಿದೆ.

ಮನುವಿಕಾಸ ಸಂಸ್ಥೆಯು ಪ್ರಗತಿಮಿತ್ರ ಸೌಹಾರ್ದ ಸಹಕಾರಿಯನ್ನು ಹುಟ್ಟುಹಾಕಿ ಇದರ ಮುಖಾಂತರ ಹಲವಾರು ಸಂಘಗಳಿಗೆ ಸಾಲವನ್ನು ನೀಡಿ ಮಹಿಳೆಯರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಪ್ರಯತ್ನಿಸುತ್ತಿದೆ. ಮನುವಿಕಾಸ ಸಂಸ್ಥೆಯು ಈ ಸಂಘಗಳಿಗೆ ಪತ್ಯ–ಪುಸ್ತಕ ನಿರ್ವಹಣೆ ಮತ್ತು ಕೆಲವು ಕೌಶಲ್ಯ ತರಬೇತಿಯನ್ನು ನೀಡಿ ಮಹಿಳೆಯರು ಸ್ವ ಉದ್ಯೋಗಿಗಳಾಗುವಂತೆ ಪ್ರೇರೆಪಿಸಿದೆ. ಶ್ರೀ ಲಕ್ಷ್ಮೀ ಸಂಘದ ಮಹಿಳೆಯರು ಈಗ ಹೊಲಿಗೆ ಮತ್ತು ಕೃಷಿಯನ್ನು ತಮ್ಮ ಸಂಘದ ಪ್ರಮುಖ ಚಟುವಟಿಕೆಯನ್ನಾಗಿಸಿಕೊಂಡಿದ್ದಾರೆ.







ಶ್ರೀಮತಿ ಮಾಲಿನಿ ನಾಯ್ಕ



ಶ್ರೀಮತಿ ದೇವಕಿ ನಾಯ್ಕ

ಮನುವಿಕಾಸ ಸಂಸ್ಥೆ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿದ್ದು ಪ್ರತಿ ತಾಲೂಕಿಗೆ ಸಂಬಂಧಿಸಿದ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ

| ತಾಲೂಕ | ಸಿಬ್ಬಂದಿಗಳ ಹೆಸರು | ಸಂಪರ್ಕ ಸಂಖ್ಯೆ |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯಸಂಘಗಳ ನಿರ್ವಹಣೆ) | 9449453774 |
| | ಹರ್ಷ ಕಬ್ಬೂರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8884794648 |
| | ವಿನಾಯಕ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9480943073 |
| | ಸಂಜಯ ಅಣ್ವೇಕರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7259337367 |
| ಸಿದ್ದಾಪುರ | ಅಶ್ವತ್ಥ್ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9901182957 |
| | ಪುನೀತ್ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9686224908 |
| ಯಲ್ಲಾಪುರ | ರೇಣುಕಾ ಉಗ್ಗಿನಕೇರಿ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9071905766 |
| | ರಾಘವೇಂದ್ರ ಭಟ್ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9448424374 |
| ಮುಂಡಗೋಡ | ಬಸವರಾಜ ರಡ್ಡೇರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8095311643 |
| | ಗಣಪತಿ ಯಲಿವಾಳ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9980205013 |
| ಕುಮಟಾ | ಮಂಜುನಾಥ ಪಟಗಾರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8660733463 |
| | ಮಹೇಶ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8277002758 |
| ಅಂಕೋಲಾ | ರವಿಚಂದ್ರ ವಡ್ಡರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9686703539 |
| ಕಾರವಾರ | ವಿಕಾಸ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9449458369 |
| ದಾಂಡೇಲಿ | ನಿರಂಜನ್ ಕದಂ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7259689630 |
| | ಮಾರುತಿ ಕದಂ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7348860595 |
| ರಾಮನಗರ | ಅಮಿತ್ ಸೋಲಯೇಕರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7026191126 |



ಸಂತೊಳ್ಳಿ ಕೆರೆಯನ್ನು ಉದ್ಘಾಟಿಸಿ ಮಾತನಾಡುತ್ತಿರುವ ಶಾಸಕರಾದ ಶ್ರೀ ಶಿವರಾಮ ಹೆಬ್ಬಾರ



ಫೆವರ್ಡ ಕೆ ಒಕ್ಕೂಟದ ಎನ್.ಜಿ.ಓ ಗಳ ಸಭೆಯು ದಿ: 25–08–2018 ರಂದು ಮನುವಿಕಾಸ ಸಂಸ್ಥೆಯ ಸಿರಸಿ ಕಛೇರಿಯಲ್ಲಿ ನಡೆಯಿತು

# ನವೋದ್ಯಮಿ ಸಂತೆ



ನವೋದ್ಯಮಿ ಸಂತೆಯನ್ನು ಉದ್ಘಾಟಿಸುತ್ತಿರುವ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ

ಹುಬ್ಬಳ್ಳಿಯ ದೇಶಪಾಂಡೆ ಪ್ರತಿಷ್ಠಾನವು ನವೋದ್ಯಮಿ ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಿದೆ. ಇದರ ಮುಖ್ಯ ಉದ್ದೇಶವೆಂದರೆ ಸಣ್ಣ ಪ್ರಮಾಣದಲ್ಲಿ ಉದ್ಯಮವನ್ನು ಪ್ರಾರಂಭಿಸಿರುವ ಉದ್ಯಮಿಗಳಿಗೆ ಅವರ ಉದ್ಯಮವನ್ನು ವಿಸ್ತರಿಸಲು ಬೇಕಾದ ನೆರವನ್ನು ನೀಡುವುದು. ಉದಾಹರಣೆಗೆ: ಉದ್ಯಮದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ತರಬೇತಿಗಳನ್ನು ನೀಡುವುದು, ಈಗಾಗಲೇ ಅಭಿವೃದ್ಧಿ ಹೊಂದಿದ ಉದ್ಯಮಿಗಳನ್ನು ಭೇಟಿ ಮಾಡಿಸುವುದು, ಅವರು ತಯಾರಿಸಿದ ವಸ್ತುಗಳಿಗೆ ನೇರ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು ಇತ್ಯಾದಿ. ದಿನಾಂಕ ರಂದು ಶಿರಸಿಯ ಮಹಾಲಿಂಗ ಶೆಟ್ಟಿ ಕಲ್ಯಾಣ ಮಂಟಪದಲ್ಲಿ ನವೋದ್ಯಮಿ ಸಂತೆಯನ್ನು ಆಯೋಜಿಸಲಾಗಿತ್ತು. ಈ ಸಂತೆಯನ್ನು ನವೋದ್ಯಮಿ ಯೋಜನೆಯ ಉತ್ತರ ಕನ್ನಡ ಜಿಲ್ಲಾ ಅಧಿಕಾರಿಗಳಾದ ಶ್ರೀ ಇಮಾನ್ಯುಯೆಲ್ ಇವರ ನೇತ್ರತ್ವದಲ್ಲಿ ಆಯೋಜಿಸಲಾಗಿತ್ತು. ಮನುವಿಕಾಸ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರ ಭಟ್ಟ ಹಾಗೂ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಇವರು ಈ ಸಂತೆ ಅಥವಾ ಮೇಳವನ್ನು ಉದ್ಘಾಟಿಸಿ ಎಲ್ಲರಿಗೂ ಶುಭ ಹಾರೈಸಿದರು. ಈ ಮೇಳದಲ್ಲಿ ಶಿರಸಿಯ ಸುತ್ತ ಮುತ್ತಲಿನ ಹಾಗೂ ಬೇರೆ ಬೇರೆ ಜಿಲ್ಲೆಗಳಿಂದ ಬಂದಂತಹ ಉದ್ಯಮಿಗಳು ತಾವು ತಯಾರಿಸಿದ ವಸ್ತುಗಳನ್ನು ಮಾರಾಟಕ್ಕೆ ಇಟ್ಟಿದ್ದರು. ಮೂರು ದಿನಗಳ ಕಾಲ ನಡೆದ ಈ ಮೇಳದಲ್ಲಿ ಮನುವಿಕಾಸ ಸಂಸ್ಥೆಯಿಂದ ರಚಿತವಾದ ಸ್ವ ಸಹಾಯ ಸಂಘದ ಸದಸ್ಯರೂ ಕೂಡ ಭಾಗವಹಿಸಿದ್ದರು. ತಾವು ತಯಾರಿಸಿದ ವಸ್ತುಗಳಿಗೆ ಉಚಿತವಾದ ಮಾರುಕಟ್ಟೆ ದೊರಕಿಸಿಕೊಟ್ಟಿದ್ದಕ್ಕೆ ಮನುವಿಕಾಸ ಸಂಸ್ಥೆಯವರಿಗೂ ಹಾಗೂ ನವೋದ್ಯಮಿ ಯೋಜನೆಯ ಅಧಿಕಾರಿಗಳಿಗೂ ಧನ್ಯವಾದಗಳನ್ನು ತಿಳಿಸಿದರು.



ನವೋದ್ಯಮಿ ಸಂತೆಯಲ್ಲಿ ಕರಕುಶಲ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಸ್ವ-ಸಹಾಯ ಸಂಘದ ಮಹಿಳೆ

# ವಿವಿಧ ಹಂತಗಳಲ್ಲಿ ಶಿರಸಿ ತಾಲೂಕಿನ ಹಾಡಲಗಿ ಹೊಸಕಟ್ಟ ಕೆರೆ ಅಭಿವೃದ್ಧಿ

















# ಮಹಿಳಾ ಸಬಲೀಕರಣದಲ್ಲಿ ಸ್ವ-ಸಹಾಯ ಸಂಘಗಳ ಒಕ್ಕೂಟದ ಪಾತ್ರ





**ಮನುವಿಕಾಸ ಸಂಸ್ಥೆ ಹಾಗೂ ಈಡಲ್‌ಗೀವ್ ಫೌಂಡೇಶನ್ ಸಹಭಾಗಿತ್ವದಲ್ಲಿ ಸ್ವ – ಸಹಾಯ ಸಂಘಗಳ ಒಕ್ಕೂಟದ ಕುರಿತು ತರಬೇತಿ.**

ಕರ್ನಾಟಕ ರಾಜ್ಯದಾದ್ಯಂತ ಸಾವಿರಾರು ಮಹಿಳಾ ಸ್ವ-ಸಹಾಯ ಸಂಘಗಳು ರಚನೆಯಾಗಿ ಮಹಿಳಾ ಅಭಿವೃದ್ಧಿ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಆದರೆ ಸ್ವ-ಸಹಾಯ ಸಂಘಗಳ ಪಾತ್ರ ಅಲ್ಲಿಗಷ್ಟೇ ಸೀಮಿತವಾಗದೆ, ತಮ್ಮ ಸಂಘಟಿತ ಶಕ್ತಿಯನ್ನು ಇನ್ನೂ ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ಗ್ರಾಮೀಣ ಮಹಿಳೆಯರ ಸ್ಥಾನಮಾನ, ಹಕ್ಕುಗಳು ಹಾಗೂ ಬಡ ಜನರ ಪರ ನೀತಿ ಬದಲಾವಣೆಯ ಬಗ್ಗೆ ಗಮನ ನೀಡಬೇಕಿದೆ. ಈ ನಿಟ್ಟಿನಲ್ಲಿ ಸ್ವ-ಸಹಾಯ ಸಂಘಗಳ ಒಕ್ಕೂಟಗಳ ಪಾತ್ರ ಮಹತ್ವದ್ದಾಗಿರುತ್ತದೆ.

ಒಂದು ಕಾರ್ಯಕ್ಷೇತ್ರದಲ್ಲಿ ಅಥವಾ ಪ್ರದೇಶದಲ್ಲಿ ಅಂದರೆ ಗ್ರಾಮ ಪಂಚಾಯಿತಿ, ಹೋಬಳಿ, ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಸಂಘಟಿತರಾಗಿರುವ ಸ್ವ ಸಹಾಯ ಸಂಘಗಳು ಒಟ್ಟುಗೂಡಿ ರಚಿತವಾಗಿರುವ ದೊಡ್ಡ ಸಂಘಟನೆಗೆ ಒಕ್ಕೂಟ ಎಂದು ಕರೆಯಬಹುದು. ಈ ಒಕ್ಕೂಟವು ಔಪಚಾರಿಕ ಅಥವಾ ಅನೌಪಚಾರಿಕವಾಗಿ ಕಾರ್ಯನಿರ್ವಹಿಸಬಹುದು.

### ಒಕ್ಕೂಟದ ರಚನೆ ಯಾವಾಗ ಮಾಡಬೇಕು

- ಸ್ವ-ಸಹಾಯ ಸಂಘಗಳು ರಚನೆಯಾಗಿ ಕನಿಷ್ಟ ಒಂದು ವರ್ಷಗಳಾಗಿ ಅವು ಸಂಘಟನೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ ಸಂದರ್ಭದಲ್ಲಿ ಅಂತಹ ಸಂಘಗಳನ್ನು ಒಟ್ಟುಗೂಡಿಸಿ ಒಕ್ಕೂಟವನ್ನು ಪ್ರಾರಂಭಿಸಬಹುದು.
- ಹೊಸ ಸದಸ್ಯತ್ವ ನೀಡಲು 6 ತಿಂಗಳಾದ ಸ್ವ-ಸಹಾಯ ಸಂಘಗಳನ್ನು ಸೇರಿಸಿಕೊಳ್ಳಬಹುದು.
- ಕಾನೂನು ಅಗತ್ಯಗಳು

### ಒಕ್ಕೂಟವನ್ನು ನೋದಣಿ ಮಾಡುವುದು ಹೇಗೆ?

- ಎಲ್ಲಾ ಸ್ವ-ಸಹಾಯ ಸಂಘಗಳಿಂದ ಒಕ್ಕೂಟದ ಸರ್ವ ಸಾಮಾನ್ಯ ಮಂಡಳಿಗೆ ಸದಸ್ಯರನ್ನು ನೇಮಿಸಿ ಕಳುಹಿಸಿದ ನಂತರ ಔಪಚಾರಿಕವಾಗಿ ಸಭೆ ಜರುಗಿಸಬೇಕು.
- ಸರ್ವ ಸದಸ್ಯರ ಸಾಮಾನ್ಯ ಮಂಡಳಿ ಸಭೆಯಲ್ಲಿ ಕಾರ್ಯಕಾರಿ ಸಮಿತಿ ಸ್ಥಾಪಿಸಿ, ಸದಸ್ಯರನ್ನು ಆಯ್ಕೆ ಮಾಡಬೇಕು. ಪದಾಧಿಕಾರಿಗಳನ್ನು ಚುನಾಯಿಸ ಬೇಕು, ಒಕ್ಕೂಟವನ್ನು ನೋಂದಣಿ ಮಾಡುವ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು.
- ಒಕ್ಕೂಟದ ಹೆಸರಿನಲ್ಲಿ ಒಂದು ಪಾನ್ ಕಾರ್ಡ ಇರತಕ್ಕದ್ದು.
- ಬ್ಯಾಂಕ್ ಖಾತೆ ತೆರೆಯುವುದು ಮತ್ತು ಖಾತೆಯಲ್ಲಿ ವ್ಯವಹರಿಸುವವರು ಯಾರೆಂದು ನಿರ್ಧರಿಸಬೇಕು.
- ನೋಂದಣಿಯ ಖರ್ಚು ವೆಚ್ಚಗಳನ್ನು ಭರಿಸುವ ಬಗ್ಗೆ ಚರ್ಚಿಸಬೇಕು.
- ಈ ಎಲ್ಲಾ ವಿಚಾರಗಳ ಚರ್ಚೆ ಮತ್ತು ತೀರ್ಮಾನವನ್ನು ಸಭೆಗೆ ಭಾಗವಹಿಸಿದ ಎಲ್ಲಾ ಸದಸ್ಯರ ಸಹಿಯೊಂದಿಗೆ ಠರಾವು ಮಾಡಬೇಕು. ಇದರಲ್ಲಿ ಕಾರ್ಯಕಾರಿ ಸದಸ್ಯರ ಹೆಸರು, ವಿಳಾಸ, ವಯಸ್ಸು, ಉದ್ಯೋಗ, ವಿದ್ಯಾರ್ಹತೆ ಮತ್ತು ಸಹಿ ಮಾಡಿರುವ ಪಟ್ಟಿ ಒಳಗೊಂಡಿರಬೇಕು.
- ನೋಂದಣಿ ಅಧಿಕಾರಿಗಳಿಗೆ ಸಲ್ಲಿಸಬೇಕಾದ ದಾಖಲುಗಳು
- ನೋಂದಣಿ ಅಧಿಕಾರಿಗಳಿಗೆ ಬರೆದ ಪತ್ರ (ಕೋರಿಕೆ ಪತ್ರ/ಅರ್ಜಿ).
- ಸರ್ವ ಸದಸ್ಯರ ಸಾಮಾನ್ಯ ಮಂಡಳಿಯ ಠರಾವು/ನಿರ್ಣಯಗಳು/ತೀರ್ಮಾನಗಳು.
- ಕಾರ್ಯಕಾರಿ/ಆಡಳಿತ ಮಂಡಳಿ ಸದಸ್ಯರ ಸಂಪೂರ್ಣ ವಿವರದ ಪಟ್ಟಿ (ಸಹಿ ಇರಬೇಕು).
- ಒಕ್ಕೂಟದ ಜ್ಞಾಪನಾ ಪತ್ರ (ಗುರಿ ಉದ್ದೇಶಗಳು, ಅನುಷ್ಠಾನಗೊಳಿಸುವ ಕುರಿತ ವಿವರ ವರದಿ)
- ಒಕ್ಕೂಟದ ನಿಯಮ ನಿಭಂದನೆಗಳು (ಬೈಲಾ)
- ಕಾರ್ಯದರ್ಶಿ ಬರೆದುಕೊಡುವ ಪ್ರಮಾಣ ಪತ್ರ (20 ರೂ. ಸ್ಟ್ಯಾಂಪ್ ಕಾಗದದ ಮೇಲೆ.)
- ಒಕ್ಕೂಟದ ಹೆಸರಿನಲ್ಲಿ ಸೀಲ್ ಮಾಡಿಸಿರಬೇಕು.
- ನೋಂದಣಿ ಶುಲ್ಕ ಕಟ್ಟಬೇಕು.

**ಸೂಚನೆ:** ನೋಂದಣಾಧಿಕಾರಿಗಳಿಗೆ ಬರೆಯುವ ಕೋರಿಕೆ ಪತ್ರದಲ್ಲಿ ನೋಂದಣಿ ಮಾಡಲು ಕಾರ್ಯಕಾರಿ ಸಮಿತಿಯ ಯಾವ ಸದಸ್ಯರಿಗೆ ಜವಾಬ್ದಾರಿ ನೀಡಲಾಗುತ್ತದೋ ಅವರ ಹೆಸರು ಸೂಚಿಸಿ. ಅವರಿಗೆ ಅಧಿಕಾರ ಕೊಡಲಾಗಿದೆ ಎಂದು ಬರೆದರೆ ಎಲ್ಲಾ ಸದಸ್ಯರು ಕಛೇರಿಗೆ ಹೋಗಬೇಕಾಗಿಲ್ಲ.

### ಒಕ್ಕೂಟಗಳ ಹಾಗೂ ಅದರ ಸದಸ್ಯ ಸಂಘಗಳ ಪಾತ್ರ ಹಾಗೂ ನಿರ್ವಹಣೆ

ಒಕ್ಕೂಟಗಳನ್ನು ರಚಿಸುವಾಗ ವಿವಿಧ ಹಂತಗಳ ಕಾರ್ಯಕ್ರಮ ಹಾಗೂ ನಿರ್ವಹಣೆಯ ಬಗ್ಗೆ ಸಂಪೂರ್ಣ ಸ್ಪಷ್ಟತೆ ಇರಬೇಕು. ಜಾಲಗಳು ಅಥವಾ ಒಕ್ಕೂಟಗಳನ್ನು ಸ್ವತಂತ್ರ ಸಂಘಟನೆಗಳನ್ನಾಗಿ ರಚಿಸುವಾಗ ಒಡೆತನ ಮತ್ತು ಹಿಡಿತ ಸಂಪೂರ್ಣವಾಗಿ ಪ್ರಾಥಮಿಕ ಅಥವಾ ಸ್ವ-ಸಹಾಯ ಗುಂಪುಗಳದ್ದಾಗಿರುತ್ತದೆ. ಸ್ವ-ಸಹಾಯ ಸಂಘಗಳು, ಗೊಂಚಲು ಒಕ್ಕೂಟಗಳು ಹಾಗೂ ಒಕ್ಕೂಟಗಳು ಇವು ಮೂರು ಹಂತದ ಆಡಳಿತ ವ್ಯವಸ್ಥೆಯಷ್ಟೇ ಆಗಿರದೆ ಪ್ರತಿಯೊಂದು ಹಂತದಲ್ಲಿಯೂ ತಮ್ಮದೇ ಆದ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಪರಸ್ಪರ ಅವಲಂಬನೆಯ ಮೂಲಕ ಕಾರ್ಯ ನಿರ್ವಹಿಸುತ್ತವೆ. ಈ ಕೆಳಗಿನ ಪಟ್ಟಿಯು ವಿವಿಧ ಹಂತಗಳ ಕಾರ್ಯವೈಖರಿಯನ್ನು ತಿಳಿಸುತ್ತದೆ :

**ಉದ್ದೇಶ**

**ಸ್ವ-ಸಹಾಯ ಸಂಘ**

- ಬಡ ಮಹಿಳೆಯರನ್ನು (ಸದಸ್ಯರನ್ನು) ಸಂಘಟಿಸಿ ತಮ್ಮ ಅಭಿವೃದ್ಧಿಗೆ ತಾವೇ ಸಹಬಾಳ್ವೆಯಿಂದ ಮತ್ತು ಒಗ್ಗಟ್ಟಿನಿಂದ ಸಂಘವನ್ನು ಉಳಿಸಿ ಬೆಳೆಸಿಕೊಂಡು ಹೋಗುವಂತಹ ಜವಾಬ್ದಾರಿ ಹೊಂದುವಂತೆ ಮಾಡುವುದು.
- ಸಂಘದ ಸದಸ್ಯರಲ್ಲಿ ಎಲ್ಲಾ ಅಭಿವೃದ್ಧಿ ಕ್ಷೇತ್ರಗಳ ಬಗ್ಗೆ ಅರಿವು ಮೂಡಿಸುವುದು.

- ಸಂಘದ ಸದಸ್ಯರ ಹಾಗೂ ಗ್ರಾಮದ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರ ಕಂಡುಕೊಳ್ಳುವುದು.
- ಸದಸ್ಯರಲ್ಲಿ ಉಳಿತಾಯ ಮನೋಭಾವ ಮೂಡಿಸುವುದು ಹಾಗೂ ಬಂಡವಾಳವನ್ನು ಜವಾಬ್ದಾರಿಯುತವಾಗಿ ಬಳಸಲು ಪ್ರೋತ್ಸಾಹಿಸುವುದು.

**ಒಕ್ಕೂಟ**

- ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಅರಿವು ಮತ್ತು ಇಲಾಖೆಗಳೊಡನೆ ಸಂಬಂಧ ಕಲ್ಪಿಸುವುದರೊಂದಿಗೆ ಸೌಲಭ್ಯಗಳು ಪಡೆಯುವಂತೆ ಮಾಡುವುದು.
- ಸಾಮಾಜಿಕ ಸ್ವ–ಸಹಾಯ ಗುಂಪುಗಳನ್ನು ಸಂಘಟಿಸುವುದು.
- ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಸ್ವ–ಸಹಾಯ ಸಂಘಗಳಲ್ಲಿ ಅರಿವನ್ನು ಹೆಚ್ಚಿಸುವುದು.
- ಬಡ ಮಹಿಳೆಯರ ಸಮಸ್ಯೆಗಳ ಬಗ್ಗೆ ನಾಗರಿಕ ಸಮಾಜದ ಗಮನ ಹಾಗೂ ಬೆಂಬಲ ಪಡೆಯುವುದು.
- ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಸ್ವ–ಸಹಾಯ ಗುಂಪುಗಳಿಗೆ ನೆರವಾಗುವುದು.
- ಮಹಿಳೆಯರಲ್ಲಿ ನಾಯಕತ್ವ ಹಾಗೂ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಸ್ವ–ಸಹಾಯ ಸಂಘಗಳನ್ನು ಬಲಗೊಳಿಸುವುದು.
- ಸಭೆ, ಸಮಾವೇಶಗಳನ್ನು ನಡೆಸುವ ಮೂಲಕ ಒಕ್ಕೂಟ ಮತ್ತು ಸ್ವ–ಸಹಾಯ ಗುಂಪುಗಳ ಪ್ರತಿನಿಧಿಗಳ ನಡುವೆ ಸಕ್ರಿಯ ಸಂಪರ್ಕ ಸಾಧ್ಯವಾಗುವಂತೆ ಹಾಗೂ ಚರ್ಚೆ ನಡೆಯುವಂತೆ ಮಾಡುವುದು.

**ಉದ್ದೇಶ**

**ಸ್ವ–ಸಹಾಯ ಸಂಘ**

- ಬಡ ಮಹಿಳೆಯರನ್ನು (ಸದಸ್ಯರನ್ನು) ಸಂಘಟಿಸಿ ತಮ್ಮ ಅಭಿವೃದ್ಧಿಗೆ ತಾವೇ ಸಹಬಾಳ್ವೆಯಿಂದ ಮತ್ತು ಒಗ್ಗಟ್ಟಿನಿಂದ ಸಂಘವನ್ನು ಉಳಿಸಿ ಬೆಳೆಸಿಕೊಂಡು ಹೋಗುವಂತಹ ಜವಾಬ್ದಾರಿ ಹೊಂದುವಂತೆ ಮಾಡುವುದು.
- ಸಂಘದ ಸದಸ್ಯರಲ್ಲಿ ಎಲ್ಲಾ ಅಭಿವೃದ್ಧಿ ಕ್ಷೇತ್ರಗಳ ಬಗ್ಗೆ ಅರಿವು ಮೂಡಿಸುವುದು.
- ಸಂಘದ ಸದಸ್ಯರ ಹಾಗೂ ಗ್ರಾಮದ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರ ಕಂಡುಕೊಳ್ಳುವುದು.
- ಸದಸ್ಯರಲ್ಲಿ ಉಳಿತಾಯ ಮನೋಭಾವ ಮೂಡಿಸುವುದು ಹಾಗೂ ಬಂಡವಾಳವನ್ನು ಜವಾಬ್ದಾರಿಯುತವಾಗಿ ಬಳಸಲು ಪ್ರೋತ್ಸಾಹಿಸುವುದು.

**ಒಕ್ಕೂಟ**

- ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಅರಿವು ಮತ್ತು ಇಲಾಖೆಗಳೊಡನೆ ಸಂಬಂಧ ಕಲ್ಪಿಸುವುದರೊಂದಿಗೆ ಸೌಲಭ್ಯಗಳು ಪಡೆಯುವಂತೆ ಮಾಡುವುದು.
- ಸಾಮಾಜಿಕ ಸ್ವ–ಸಹಾಯ ಗುಂಪುಗಳನ್ನು ಸಂಘಟಿಸುವುದು.
- ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಸ್ವ–ಸಹಾಯ ಸಂಘಗಳಲ್ಲಿ ಅರಿವನ್ನು ಹೆಚ್ಚಿಸುವುದು.
- ಬಡ ಮಹಿಳೆಯರ ಸಮಸ್ಯೆಗಳ ಬಗ್ಗೆ ನಾಗರಿಕ ಸಮಾಜದ ಗಮನ ಹಾಗೂ ಬೆಂಬಲ ಪಡೆಯುವುದು.
- ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಸ್ವ–ಸಹಾಯ ಗುಂಪುಗಳಿಗೆ ನೆರವಾಗುವುದು.
- ಮಹಿಳೆಯರಲ್ಲಿ ನಾಯಕತ್ವ ಹಾಗೂ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಸ್ವ–ಸಹಾಯ ಸಂಘಗಳನ್ನು ಬಲಗೊಳಿಸುವುದು.
- ಸಭೆ, ಸಮಾವೇಶಗಳನ್ನು ನಡೆಸುವ ಮೂಲಕ ಒಕ್ಕೂಟ ಮತ್ತು ಸ್ವ–ಸಹಾಯ ಗುಂಪುಗಳ ಪ್ರತಿನಿಧಿಗಳ ನಡುವೆ ಸಕ್ರಿಯ ಸಂಪರ್ಕ ಸಾಧ್ಯವಾಗುವಂತೆ ಹಾಗೂ ಚರ್ಚೆ ನಡೆಯುವಂತೆ ಮಾಡುವುದು.

**ಸದಸ್ಯತ್ವ ಮತ್ತು ಅರ್ಹತೆ**

- ಸ್ವ–ಇಚ್ಛೆಯುಳ್ಳ ಹಾಗೂ ಆಸಕ್ತಿಯುಳ್ಳ ಸದಸ್ಯರು ಭಾಗವಹಿಸುತ್ತಾರೆ.
- ಪ್ರತಿನಿಧಿಗಳು, ಪದಾಧಿಕಾರಿಗಳು ವರ್ಷಕ್ಕೊಮ್ಮೆ ಬದಲಾಗುತ್ತಿರಬೇಕು. ಬಡ ಕುಟುಂಬದವರು ಸದಸ್ಯರಾಗಿರುತ್ತಾರೆ.
- 20ರಿಂದ 50 ಸ್ವ–ಸಹಾಯ ಸಂಘಗಳು ಸದಸ್ಯರಾಗಿರಬೇಕು.
- 6 ತಿಂಗಳ ಮೇಲ್ಪಟ್ಟು ಅಸ್ತಿತ್ವದಲ್ಲಿರುವ ಹಾಗೂ ಚೆನ್ನಾಗಿ ಕಾರ್ಯ ನಿರ್ವಹಿಸುವ ಸಂಘಗಳು ಸದಸ್ಯರಾಗಿರುತ್ತಾರೆ.
- ಒಕ್ಕೂಟ ನಿಗದಿಪಡಿಸುವ ಸದಸ್ಯತ್ವ ಶುಲ್ಕ ನೀಡಲು ಸಾಮರ್ಥ್ಯ ಇರಬೇಕು.
- ಒಕ್ಕೂಟದ ನೀತಿ ನಿಯಮಗಳನ್ನು ಒಪ್ಪಿ ನಡೆದುಕೊಳ್ಳುವ ಗುಂಪುಗಳು ಸದಸ್ಯರಾಗಿರುತ್ತಾರೆ.

**ಕಾನೂನಿನ ಮಾನ್ಯತೆ ಮತ್ತು ಕಾರ್ಯಕ್ಷೇತ್ರ**

- ಅನೌಪಚಾರಿಕ ಸಂಘಟನೆ ಆಗಿದ್ದು ಈ ಗುಂಪುಗಳು ಬ್ಯಾಂಕುಗಳಿಂದ ಕಾನೂನು ರೀತಿಯಲ್ಲಿ ಗುರುತಿಸಲ್ಪಟ್ಟಿವೆ.
- ಕಾನೂನುಬದ್ಧವಾಗಿ 1960ರ ಸಂಘ ಸಂಸ್ಥೆಗಳ ಕಾಯ್ದೆಯಡಿ ಇದು ತಾಲೂಕು ಅಥವಾ ಹಲವು ಹಳ್ಳಿಗಳು/ ಸಂಘಗಳು ಸೇರಿ ರಚಿತವಾಗಿರುತ್ತದೆ.
- ಒಕ್ಕೂಟದ ಸದಸ್ಯರು ಹಲವಾರು ಹಳ್ಳಿಗಳನ್ನು ಪ್ರತಿನಿಧಿಸುತ್ತಾರೆ.

**ರಚನೆ**

- ಸ್ವ–ಸಹಾಯ ಸಂಘದ ಸದಸ್ಯರು ತಾವೇ ಆಯ್ಕೆಯಾಗಿರುತ್ತಾರೆ. ಮೊದಲ ಕೆಲವು ಸಭೆಗಳನ್ನು ಪ್ರೇರೇಪಕ ಸಂಸ್ಥೆಗಳು ಮಾಡಬೇಕಾಗುತ್ತದೆ.
- ನಿಯಮ ನಿಬಂಧನೆಗಳನ್ನು ರಚಿಸಲು ಪ್ರೇರೇಪಕ ಸಂಸ್ಥೆ ಸಹಾಯ ಮಾಡುತ್ತದೆ.
- ಸ್ವ–ಸಹಾಯ ಸಂಘಗಳು ರಚನೆಯಾಗಿ 18–24 ತಿಂಗಳ ನಂತರ ಒಕ್ಕೂಟವನ್ನು ರಚಿಸಬಹುದು.
- ಹೆಚ್ಚಿನ ಒಕ್ಕೂಟಗಳು ಸ್ವತಂತ್ರವಾಗಿ ನಡೆಯುತ್ತವೆ.

**ಆಡಳಿತ**

**ಎ. ಜನರಲ್ ಬಾಡಿ**

- ಪ್ರತಿ ಸ್ವ–ಸಹಾಯ ಸಂಘವು ಸದಸ್ಯತ್ವ ಹೊಂದಿದ್ದು ಸಂಘದ ಪದಾಧಿಕಾರಿಗಳು ಪ್ರತಿನಿಧಿಸುತ್ತಾರೆ. (50 ರಿಂದ 100 ಸದಸ್ಯರು).
- ಎಲ್ಲಾ ವೈಯಕ್ತಿಕ ಸದಸ್ಯರಾಗಿರುತ್ತಾರೆ. (10 ರಿಂದ 20)

**ಬಿ. ಆಡಳಿತ ಮಂಡಳಿ** (ಕಾರ್ಯಕಾರಿ ಸಮಿತಿ)

- ಗುಂಪುಗಳಿಂದ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಒಳಗೊಂಡಿರುತ್ತದೆ.
- ವರ್ಷಕ್ಕೊಮ್ಮೆ ನಾಯಕತ್ವವನ್ನು ಬದಲಾಯಿಸುವುದು.
- 9–11 ಸದಸ್ಯರ ಆಡಳಿತ ಮಂಡಳಿಯನ್ನು ರಚಿಸುವುದು.
- ಪ್ರತಿ ಸದಸ್ಯರು ವಿಭಾಗದ ಮಟ್ಟದಿಂದ ಆಯ್ಕೆಯಾಗಿ ಬರುತ್ತಾರೆ.
- ಆಡಳಿತ ಮಂಡಳಿಯನ್ನು ಎರಡು ವರ್ಷಕ್ಕೊಮ್ಮೆ ಬದಲಾಯಿಸಬೇಕು.
- ಆಡಳಿತ ಮಂಡಳಿಯಲ್ಲಿ ಆಯ್ಕೆಯಾದ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

**ಪಾತ್ರ ಮತ್ತು ಸೇವೆ**

- ಉಳಿತಾಯ ಮತ್ತು ಸಾಲದ ಚಟುವಟಿಕೆಗಳನ್ನು ನಡೆಸುವುದು.
- ತನ್ನ ಸದಸ್ಯರ ಆರ್ಥಿಕ ಅಭಿವೃದ್ಧಿಗಾಗಿ ಹಣಕಾಸು ಕ್ರೋಢೀಕರಿಸುವುದು.
- ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.
- ವಿಭಾಗಗಳ ಮತ್ತು ಗುಂಪುಗಳ ನಾಯಕರಿಗೆ ಸಾಮರ್ಥ್ಯ ಹೆಚ್ಚಿಸುವುದರ ಮೂಲಕ ಸ್ವಯಂ ನಿರ್ವಹಣೆ ಮತ್ತು ಸಮಸ್ಯೆಗಳನ್ನು ಬಗೆಹರಿಸುವುದರ ಬಗ್ಗೆ ಗಮನ ನೀಡುವುದು.
- ಗುಂಪುಗಳಿಗೆ ಬೇಕಾಗುವ ಸಾಲ ಸೌಲಭ್ಯವನ್ನು ಒದಗಿಸುವುದು.

# ವಿವಿಧ ಹಂತಗಳಲ್ಲಿ ಶಿರಸಿ ತಾಲೂಕಿನ ಹಾಡಲಗಿ ಮಲ್ಲಾಣಿಕಟ್ಟ ಕೆರೆ ಅಭಿವೃದ್ಧಿ









## ಮನುವಿಕಾಸ ಸಂಸ್ಥೆಗೆ ಆರ್ಥಿಕ ಸಹಕಾರ ನೀಡುತ್ತಿರುವ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು

Deshpande Foundation

EdelGive Foundation — An Edelweiss Initiative

Anandana — Coca-Cola India Foundation

SGP — The GEF Small Grants Programme — UNDP India — gef

GiveIndia — the power to change lives

HDB Financial Services

Earthwatch Institute

Voice Foundation

NABARD


ಮನುವಿಕಾಸ ಸಂಸ್ಥೆಯ ಸಂಪರ್ಕವಿಳಾಸ

# MANUVIKASA

**'Mangesh Mahalaxmi' Building**

Rayarpeth, Behind Anjaneya Temple, Vijayanagar,Sirsi Cell: **9845982552**

**www.manuvikasa.blogspot.com**

**http://facebook.com/manuvikasa.karjagi  www.manuvikasaindia.org**

**Email : manuvikasa@gmail.com**


Multi Offset, SIRSI 9449453234